ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮಾರ್ಚ್ 21, 2022

ಸಂಪುಟ : 48 ಸಂಚಿಕೆ : 310 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com



## ವಿಜೃಂಭಣೆಯಿಂದ ನಡೆದ ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ರಥೋತ್ಸವ

ಜಗಳೂರು, ಮಾ.20- ಚಿತ್ರದುರ್ಗ ಜಿಲ್ಲೆಯ ಪ್ರಸಿದ್ಧ ಶ್ರೀ ಕ್ಷೇತ್ರ ನಾಯಕನ ಹಟ್ಟಿಯ ಶ್ರೀ ಗುರು ತಿಪ್ಪೇರುದ್ರಸ್ವಾಮಿ ರಥೋತ್ಸವವು ಇಂದು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ದಾವಣಗೆರೆ, ಬಳ್ಳಾರಿ ಜಿಲ್ಲೆ ಸೇರಿದಂತೆ, ಹಲವು ಜಿಲ್ಲೆಗಳಿಂದ ಭಕ್ತರು ಭಾಗವಹಿಸಿದ್ದರು. ಜಾತ್ರೆ ಪ್ರಯುಕ್ತ ಕೆ.ಎಸ್.ಆರ್.ಟಿ.ಸಿ. ದಾವಣ ಗೆರೆ, ಚಿತ್ರದುರ್ಗ ವಿಭಾಗದಿಂದ ನೂರಕ್ಕೂ ಹೆಚ್ಚಿನ ಬಸ್‌ಗಳನ್ನು ಬಿಡಲಾಗಿತ್ತು. ನಾಯಕನ ಹಟ್ಟಿ ಶ್ರೀ ಗುರು ತಿಪ್ಪೇರುದ್ರ ಸ್ವಾಮಿಯ ರಥೋತ್ಸವದ ಮುಕ್ತಿ ಬಾವುಟ ಚಳ್ಳಕೆರೆ ಪ್ರಕಾಶ್ ಅವರಿಗೆ 16.5 ಲಕ್ಷಕ್ಕೆ ಹರಾಜಾಯಿತು.

## ಹಿಜಾಬ್ ತೀರ್ಪು ನೀಡಿದ ಜಡ್ಜ್‌ಗೆ ಜೀವ ಬೆದರಿಕೆ : 'ವೈ' ಹಂತದ ಭದ್ರತೆ

ಬೆಂಗಳೂರು, ಮಾ. 20 – ಹಿಜಾಬ್ ಕುರಿತು ತೀರ್ಪು ನೀಡಿದ ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆ ಎದುರಾಗಿರುವ ಹಿನ್ನೆಲೆಯಲ್ಲಿ, ಅವರಿಗೆ 'ವೈ' ಹಂತದ ಭದ್ರತೆ ಕಲ್ಪಿಸಲಾಗಿದೆ.

ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆ ಒಡ್ಡಿದ್ದ ವ್ಯಕ್ತಿಯೋರ್ವನನ್ನು ತಮಿಳುನಾಡಿನಲ್ಲಿ ಬಂಧಿಸಲಾಗಿದೆ. ನಂತರ ರಾಜ್ಯ ಸರ್ಕಾರ ಭದ್ರತೆ ಕಲ್ಪಿಸುವ ತೀರ್ಮಾನ ತೆಗೆದುಕೊಂಡಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸರ್ಕಾರ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ. ಈ ಬಗ್ಗೆ ಪರಿಶೀಲಿಸುವಂತೆ ಡಿ.ಜಿ.ಪಿ.ಗೆ ಆದೇಶಿಸಲಾಗಿದೆ ಎಂದಿದಾರೆ.

ತಮಿಳಿನಲ್ಲಿ ಮಾತನಾಡಿದ ವ್ಯಕ್ತಿಯೋರ್ವ ತೀರ್ಪು ನೀಡಿದ ಮೂವರು ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆ ಹಾಕಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಈ ಬಗ್ಗೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ.

ಕೆಲ ದೇಶ ವಿರೋಧಿಗಳು ದೇಶದ ವ್ಯವಸ್ಥೆಗೆ ಸವಾಲೆಸೆಯುವ ಪ್ರಯತ್ನ ನಡೆಸಿದ್ದಾರೆ. ಈ ರೀತಿಯ ಘಟನೆ ಹಿಂದೆಂದೂ ನಡೆದಿರಲಿಲ್ಲ ಎಂದು ಬೊಮ್ಮಾಯಿ ಹೇಳಿದ್ದಾರೆ. ನ್ಯಾಯಾಂಗದ ತೀರ್ಪನ್ನು ಪ್ರತಿಯೊಬ್ಬರೂ ಪಾಲಿಸಬೇಕು. ತೀರ್ಪಿನ ಬಗ್ಗೆ ಮೇಲ್ಮನವಿ ಸಲ್ಲಿಸಲು ವ್ಯವಸ್ಥೆಯಲ್ಲಿ ಎಲ್ಲ ಅವಕಾಶಗಳಿವೆ. ಆದರೂ, ಕೆಲವರು ವ್ಯವಸ್ಥೆಯ ವಿರುದ್ಧ ಜನರನ್ನು ಪ್ರಚೋದಿಸುತ್ತಿದ್ದಾರೆ. ಇದನ್ನು ಸಹಿಸುವುದಿಲ್ಲ, ಇವರನ್ನು ಹತ್ತಿಕ್ಕಲಾಗುವುದು ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಬೊಮ್ಮಾಯಿ ಹೇಳಿದ್ದಾರೆ.

ತಮಿಳುನಾಡು ತೌಹೀದ್ ಜಮಾತ್ ಎಂಬ ಸಂಘಟನೆಯ ಪದಾಧಿಕಾರಿಯೋರ್ವನನ್ನು ತಮಿಳುನಾಡು ಪೊಲೀಸರು ಶನಿವಾರ ಬಂಧಿಸಿದ್ದಾರೆ. ಬಂಧಿತನನ್ನು ರಹಮತ್‌ವುಲ್ಲಾ ಎಂದು ಗುರುತಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆ ಹಾಕಲಾಗಿದೆ. ಅಪಘಾತದ ರೀತಿಯಲ್ಲಿ ಹಲ್ಲೆ ನಡೆಸಲು ಕರೆ (3ನೇ ಪುಟಕ್ಕೆ)

## ಆದಾಯ ತೆರಿಗೆ ದಾಳಿಯಲ್ಲಿ 224 ಕೋಟಿ ಅಕ್ರಮ ಪತ್ತೆ

ನವದೆಹಲಿ ಮಾ. 20 – ಮಹಾರಾಷ್ಟ್ರದ ಯುನಿಕಾರ್ನ್ ಉದ್ಯಮ ಇನ್‌ಫ್ರಾ. ಮಾರ್ಕೆಟ್ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ ಇಲಾಖೆ, ಅಘೋಷಿತ 224 ಕೋಟಿ ರೂ.ಗಳ ಆದಾಯ ಪತ್ತೆ ಮಾಡಿದೆ. ಮಾರ್ಚ್ 9ರಂದು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶ, ಉತ್ತರ ಪ್ರದೇಶ ಹಾಗೂ ಮಧ್ಯ ಪ್ರದೇಶಗಳಲ್ಲಿರುವ ಉದ್ಯಮದ 23 ತಾಣಗಳ ಮೇಲೆ ದಾಳಿ ನಡೆಸಲಾಗಿತ್ತು.

ಕಟ್ಟಡ ನಿರ್ಮಾಣ ಸಾಮಗ್ರಿಗಳ ಮಾರಾಟದಲ್ಲಿ ತೊಡಗಿರುವ ಈ ಉದ್ಯಮ, ವಾರ್ಷಿಕ 6 ಸಾವಿರ ಕೋಟಿ ರೂ.ಗಳ ವಹಿವಾಟು ನಡೆಸುತ್ತಿದೆ.

## 8 ರಿಂದ 16 ವಾರಗಳ ಅಂತರದಲ್ಲಿ ಕೊವಿಶೀಲ್ಡ್

ನವದೆಹಲಿ, ಮಾ. 20 – ಕೊವಿಶೀಲ್ಡ್‌ನ ಮೊದಲ ಡೋಸ್ ಪಡೆದ 8-16 ವಾರಗಳಲ್ಲಿ ಎರಡನೇ ಡೋಸ್ ನೀಡಬಹುದು ಎಂದು ಲಸಿಕೆ ಕುರಿತ ಉನ್ನತ ಸಂಸ್ಥೆಯಾದ ಎನ್.ಟಿ.ಎ.ಜಿ.ಐ. ಶಿಫಾರಸ್ಸು ಮಾಡಿದೆ. ಪ್ರಸಕ್ತ ಕೊವಿಶೀಲ್ಡ್ ಲಸಿಕೆಯ ಎರಡನೇ ಡೋಸ್ ಅನ್ನು 12-16 ವಾರಗಳ ನಂತರ ನೀಡಲಾಗುತ್ತಿದೆ. ಆದರೆ, ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ ಲಸಿಕೆಯ ಗಡುವಿನಲ್ಲಿ ಯಾವುದೇ ಬದಲಾವಣೆಗೆ ಶಿಫಾರಸ್ಸು ಮಾಡಿಲ್ಲ. 28 ವಾರಗಳ ಅಂತರದಲ್ಲಿ ಕೊವ್ಯಾಕ್ಸಿನ್ ಲಸಿಕೆ ನೀಡಲಾಗುತ್ತದೆ.


## ಕಾಡುಹಂದಿಗೆ ಇಟ್ಟಿದ್ದ ಬಲೆಗೆ 2 ಕರಡಿಗಳು ಸೆರೆ

**ಮತ್ತೊಂದು ಕರಡಿ ಸುದ್ದಿಯಿಂದ ಜನರಲ್ಲಿ ಭೀತಿ**

ಹೊನ್ನಾಳಿ, ಮಾ.20- ಕಾಡುಹಂದಿಗಳನ್ನು ಹಿಡಿಯಲು ಅಡಿಕೆ ತೋಟದಲ್ಲಿ ಹಾಕಿದ್ದ ಬಲೆಗೆ ಕುಡಿಯಲು ನೀರು ಅರಸಿ ಬಂದಿದ್ದ ಎರಡು ಕರಡಿಗಳು ಬಿದ್ದಿರುವ ಘಟನೆ ತಾಲ್ಲೂಕಿನ ಹೊಳೆ ಅರಳಹಳ್ಳಿ ಗ್ರಾಮದ ಅಡಿಕೆ ತೋಟದಲ್ಲಿ ಭಾನುವಾರ ಬೆಳಿಗ್ಗೆ 7ರ ಸುಮಾರಿಗೆ ನಡೆದಿದೆ. ತಾಲ್ಲೂಕಿನ ಹೊಳೆ ಅರಳಹಳ್ಳಿ ಗ್ರಾಮದ ಲಕ್ಷ್ಮಪ್ಪ ಎಂಬ ರೈತರ ಅಡಿಕೆ ತೋಟದಲ್ಲಿ ಈ ಘಟನೆ ನಡೆದಿದೆ.


ಗ್ರಾಮದ ಲಕ್ಷ್ಮಪ್ಪ ಎಂಬುವವರ ಮಗ ಹನುಮಂತ ಬೆಳಿಗ್ಗೆ ಹೊಲಕ್ಕೆ ತೆರಳಿದಾಗ ಈ ಘಟನೆ ನಡೆದಿದೆ. ಗ್ರಾಮದಿಂದ ಮೂರು ಕಿ.ಮೀ ಅಂತರದಲ್ಲಿರುವ ಚಾನಲ್ ಹಾಗು ಗುಡ್ಡದ ತೋಟದ ಬಳಿ ಬಲೆಗೆ ಆರಂಭದಲ್ಲಿ ಒಂದು ಕರಡಿ ಸೆರೆಯಾಗಿದ್ದು, ಅದರ ಚೀರಾಟಕ್ಕೆ ಮತ್ತೊಂದು ಕರಡಿ ಬಂದು ಸೆರೆಯಾಗಿರುವುದಾಗಿ ಹತ್ತಿರದ (2ನೇ ಪುಟಕ್ಕೆ)

## ನಗರಕ್ಕೆ ಇಂದು ಮುಖ್ಯಮಂತ್ರಿ ಬೊಮ್ಮಾಯಿ



ದಾವಣಗೆರೆ, ಮಾ.20- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಳೆ ದಿನಾಂಕ 21 ರ ಸೋಮವಾರ ಬೆಳಗ್ಗೆ 9 ಗಂಟೆಗೆ ಬೆಂಗಳೂರಿನಿಂದ ಹೊರಟು, ಬೆಳಿಗ್ಗೆ 10.15 ಕ್ಕೆ ನಗರದ ಜಿ.ಎಂ.ಐ.ಟಿ. ಹೆಲಿಪ್ಯಾಡ್‌ಗೆ (3ನೇ ಪುಟಕ್ಕೆ)

## ಭಾರತದಲ್ಲಿ ಭವಿಷ್ಯದ ಕೊರೊನಾ ಅಲೆ ತೀವ್ರ ಪ್ರಭಾವ ಬೀರಲಾರದು



ನವದೆಹಲಿ, ಮಾ. 20 – ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ನೀಡಲಾಗಿದೆ ಹಾಗೂ ಸಹಜ ಸೋಂಕಿನಿಂದ ರೋಗ ನಿರೋಧಕತೆ ಬಂದಿದೆ. ಹೀಗಾಗಿ ಮುಂದೆ ಕೊರೊನಾ ಅಲೆಗಳು ಬಂದರೂ ತೀವ್ರ ಪ್ರಭಾವ ಬೀರುವ ಸಾಧ್ಯತೆ ಇಲ್ಲ ಎಂದು ಕೆಲ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಕೊರೊನಾ ಪ್ರಕರಣಗಳು ಹಾಗೂ ಸಾವಿನ ಸಂಖ್ಯೆ ಕೆಲ ಕಾಲಗಳಿಂದ ಕಡಿಮೆ ಇರುವ ಕಾರಣ ಮಾಸ್ಕ್ ಕಡ್ಡಾಯಗೊಳಿಸುವುದನ್ನು ಕೈ ಬಿಡಬೇಕು ಎಂದೂ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ.

ಭಾನುವಾರ ದೇಶದಲ್ಲಿ 1,761 ಕೊರೊನಾ ಸೋಂಕಿತರು ಕಂಡು ಬಂದಿದ್ದರು ಹಾಗೂ 127 ಸಾವುಗಳು ಸಂಭವಿಸಿದ್ದವು. ಸಕ್ರಿಯ ಸೋಂಕಿತರ ಸಂಖ್ಯೆ 26 ಸಾವಿರದಷ್ಟಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಎ.ಐ.ಐ.ಎಂ.ಎಸ್.ನ ಹಿರಿಯ ಸೋಂಕು ರೋಗ ಪರಿಣಿತ ಡಾ. ಸಂಜಯ್ ರಾಯ್, ಕೊರೊನಾ ವೈರಸ್ ಮ್ಯುಟೇಷನ್ ಆಗುವುದು ಸಹಜ. ಸಾವಿರಕ್ಕೂ ಹೆಚ್ಚು ಮ್ಯುಟೇಷನ್ ಆಗಿದೆ. ಆದರೆ ಕೇವಲ ಐದು ರೂಪಾಂತರಿಗಳಷ್ಟೇ ಕಳವಳಕಾರಿ ಎಂದಿದ್ದಾರೆ.

ಕಳೆದ ವರ್ಷ ಕಂಡು ಬಂದ ಎರಡನೇ ಅಲೆಯಲ್ಲಿ ಭಾರತ ತೀವ್ರ ಸಾವು - ನೋವು ಕಂಡಿತ್ತು. ಆದರೆ, ನೈಸರ್ಗಿಕ ಸೋಂಕಿನಿಂದ ಉತ್ತಮ ಹಾಗೂ ದೀರ್ಘಾವಧಿ ರಕ್ಷಣೆ ಸಿಗುತ್ತದೆ. ಲಸಿಕೆ ವ್ಯಾಪಕವಾಗಿ ನೀಡಲಾಗಿದೆ. ಹೀಗಾಗಿ ಭವಿಷ್ಯದಲ್ಲಿ ತೀವ್ರ ಪರಿಣಾಮ ಬೀರುವ ಅಲೆ ಬರುವ ಸಾಧ್ಯತೆ ಕಡಿಮೆ ಎಂದು ರಾಯ್ ಹೇಳಿದ್ದಾರೆ.

ಸರ್ಕಾರ ಮಾಸ್ಕ್ ಕಡ್ಡಾಯಗೊಳಿಸುವುದನ್ನು ಸಡಿಲಿಸಬೇಕು.

ಹೆಚ್ಚಿನ ಅಪಾಯ ಇರುವವರು ಹಾಗೂ ಹಿರಿಯ ನಾಗರಿಕರು ಮುನ್ನೆಚ್ಚರಿಕೆಯಾಗಿ ಮಾಸ್ಕ್ ಧರಿಸಬಹುದು ಎಂದವರು ಹೇಳಿದ್ದಾರೆ.

ಹೊಸ ರೂಪಾಂತರಿ ಬಂದರೂ ಸಹ ಭಾರತದಲ್ಲಿ ತೀವ್ರ ಪರಿಣಾಮವಾಗುವ ಸಾಧ್ಯತೆ ಕಡಿಮೆ. ಕೆಲ ತಿಂಗಳವರೆಗೆ ಇದೇ ಪರಿಸ್ಥಿತಿ ಇರಲಿದೆ ಎಂದು ಸೋಂಕು ರೋಗ ಪರಿಣಿತ ಹಾಗೂ ಸಾರ್ವಜನಿಕ ಆರೋಗ್ಯ ಪರಿಣಿತ ಡಾ. ಚಂದ್ರಕಾಂತ್ ಲಹರಿಯ ಹೇಳಿದ್ದಾರೆ.

ಆದರೂ, ಇತರೆ ದೇಶಗಳ ಪರಿಸ್ಥಿತಿ ಮೇಲೆ ನಿಗಾ ವಹಿಸಬೇಕು. ಜಿನೋಮ್ ಪರೀಕ್ಷೆ ಮುಂದುವರೆಸಬೇಕು. ಸಮಾಜ ಕೊರೊನಾ ಜೊತೆ ಬದುಕಲು ಸಿದ್ಧವಾಗಬೇಕು ಎಂದು ಲಹರಿಯ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ದೇಶದ ಬಹುತೇಕರಿಗೆ ಮಾಸ್ಕ್ ಅಗತ್ಯವಿಲ್ಲ. ಹಂತ, ಹಂತವಾಗಿ ಮಾಸ್ಕ್ ಕಡ್ಡಾಯ ಕೈ ಬಿಡಬೇಕು ಎಂದೂ ಅವರು ಹೇಳಿದ್ದಾರೆ.

## ಸಗಟು ಡೀಸೆಲ್ ಬೆಲೆ 25 ರೂ. ಹೆಚ್ಚಳ

**ಪಂಪ್‌ಗಳಿಂದಲೇ ಸಗಟು ಖರೀದಿ : ಕಂಪನಿಗಳಿಗೆ ನಷ್ಟ**

ನವದೆಹಲಿ, ಮಾ. 20 – ಸಗಟಾಗಿ ಮಾರಲಾಗುವ ಡೀಸೆಲ್ ಬೆಲೆಯನ್ನು ಲೀಟರ್‌ಗೆ 25 ರೂ. ಹೆಚ್ಚಿಸಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ.40ರಷ್ಟು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಚಿಲ್ಲರೆ ಡೀಸೆಲ್ ಮಾರಾಟ ಬೆಲೆಯನ್ನು ಹೆಚ್ಚಿಸಿಲ್ಲ. ಒಂದೆಡೆ ಸಗಟು ಮಾರಾಟ ಬೆಲೆ ಹೆಚ್ಚಿಸಿದ್ದರೆ, ಇನ್ನೊಂದೆಡೆ ಚಿಲ್ಲರೆ ಮಾರಾಟ ಬೆಲೆಯನ್ನು ಯಥಾಸ್ಥಿತಿಯಲ್ಲಿ ಉಳಿಸಲಾಗಿದೆ. ಹೀಗಾಗಿ ಸಾಮಾನ್ಯವಾಗಿ ಸಗಟು ತಾಣದಲ್ಲಿ ಡೀಸೆಲ್ ಖರೀದಿಸುತ್ತಿದ್ದವರು, ಪೆಟ್ರೋಲ್ ಪಂಪ್‌ಗಳಲ್ಲೇ ಖರೀದಿ ಮಾಡುತ್ತಿದ್ದಾರೆ. ಇದರಿಂದಾಗಿ ಸಾಮಾನ್ಯ ಪೆಟ್ರೋಲ್ ಪಂಪ್‌ಗಳಲ್ಲಿ ಡೀಸೆಲ್ ಮಾರಾಟ ಶೇ.20ರಷ್ಟು ಹೆಚ್ಚಾಗಿದೆ.

ಇದರಿಂದಾಗಿ ಪೆಟ್ರೋಲ್ ಹಾಗೂ ಡೀಸೆಲ್ (3ನೇ ಪುಟಕ್ಕೆ)

## ಹರಪನಹಳ್ಳಿ ಕಸಾಪಕ್ಕೆ ಉಚ್ಚೆಂಗೆಪ್ಪ ಅಧ್ಯಕ್ಷ



ಹರಪನಹಳ್ಳಿ, ಮಾ.20- ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರನ್ನಾಗಿ ನ್ಯಾಯವಾದಿ ಕೋರಿಶೆಟ್ಟಿ ಉಚ್ಚೆಂಗೆಪ್ಪ ಅವರನ್ನು ನೇಮಕ ಮಾಡಿ ಬಳ್ಳಾರಿ ಕಸಾಪ ಜಿಲ್ಲಾ ಅಧ್ಯಕ್ಷ ರುದ್ರಪ್ಪ ಅವರು ಆದೇಶ ಹೊರಡಿಸಿದ್ದಾರೆ.

## ಮತ್ತೆ ಮನುಸ್ಮೃತಿಗೆ ಮುಂದಾದ ಕೇಂದ್ರ

**ಕಾರ್ಮಿಕರ ಸಮಾವೇಶದಲ್ಲಿ ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ವಿಜಯಭಾಸ್ಕರ್ ಆಕ್ರೋಶ**



ದಾವಣಗೆರೆ, ಮಾ.20- ದೇಶದಲ್ಲಿ ಮನುಸ್ಮೃತಿ ಸಂಸ್ಕೃತಿಯನ್ನು ಮತ್ತೆ ತರಲು ಕೇಂದ್ರ ಸರ್ಕಾರ ಮುಂದಾಗುತ್ತಿದೆ. ಭಗವದ್ಗೀತೆಯನ್ನು ಪಠ್ಯದಲ್ಲಿ ತರಲು ಹುನ್ನಾರ ನಡೆಸುತ್ತಿದ್ದು, ಅದರ ವಿರುದ್ಧ ಧಿಕ್ಕಾರ ಹೇಳಬೇಕಾಗಿದೆ ಎಂದು ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಡಿ. ವಿಜಯಭಾಸ್ಕರ್ ತಿಳಿಸಿದರು.

ಅವರು, ಇಂದು ನಗರದ ರೋಟರಿ ಬಾಲ ಭವನದಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ವತಿಯಿಂದ ಆಯೋಜಿಸಲಾಗಿದ್ದ ದಾವಣಗೆರೆ ಜಿಲ್ಲಾ ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿ ಪಾಲ್ಗೊಂಡು ಮಾತನಾಡಿದರು.

ಹಿಂದೂ ರಾಷ್ಟ್ರ ಎಂದರೆ ಹಿಂದೂಗಳಿಗೆ ಎಲ್ಲವೂ ಸಿಗುವುದಿಲ್ಲ. ಇಲ್ಲಿ ಕೇವಲ ಬ್ರಾಹ್ಮಣ್ಯವೇ ಪಾರುಪತ್ಯ ಮತ್ತೆ ನಡೆಯಲಿದೆ. ಮೊತ್ತೊಮ್ಮೆ ರಾಷ್ಟ್ರದಲ್ಲಿ ದಲಿತರು, ಶೂದ್ರರು ಎಂದು ವರ್ಗೀಕರಣ ಮಾಡಿ ಹೇಳುವ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ನಮ್ಮನ್ನಾಳುವ ಸರ್ಕಾರಗಳು ದೇವರು ಮತ್ತು ಧರ್ಮದ ಹೆಸರಿನಲ್ಲಿ ಇಂದು ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿದ್ದು, ವಿನಾಕಾರಣ ಧರ್ಮ ಮತ್ತು ಜಾತಿಗಳ ಮಧ್ಯೆ ಜನರನ್ನು ಎತ್ತಿ ಕಟ್ಟಲಾಗುತ್ತಿದೆ. ದೇಶದ ಜನರನ್ನು ಒಗ್ಗೂಡಿಸಿ ಸಮಾನತೆ ಸಾರಿ, ಆರ್ಥಿಕತೆ ಉಳಿಸುವ ಬದಲು ಜನರ ಮಧ್ಯೆ ಕಂದಕವನ್ನು ಸೃಷ್ಟಿ ಮಾಡುತ್ತಿದೆ. ಇಂತಹ ಸರ್ಕಾರಗಳ ವಿರುದ್ಧ ಜನರು ಹೋರಾಟ ಮಾಡಿ ಇಂತಹ ಕಂದಕ ಹೋಗಲಾಡಿಸಿ ಪ್ರಜಾಪ್ರಭುತ್ವ ಉಳಿಸಬೇಕಾಗಿದೆ ಎಂದು ಕರೆ ನೀಡಿದರು.

ಸಿಐಟಿಯು ಪ್ರಧಾನ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿ, ಬೆಲೆ ಏರಿಕೆಯಂತಹ ಪ್ರಕ್ರಿಯೆಗಳನ್ನು ನಡೆಸುತ್ತಿರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ದಂಧೆಯಾಗಿದ್ದು, ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಕಾರಣ ಬೆಲೆ ಏರಿಕೆ ವಿರುದ್ಧ ಕಾರ್ಮಿಕರು ಹೋರಾಟ ಮಾಡುವ ಅನಿವಾರ್ಯತೆ ಎದುರಾಗಿದೆ ಎಂದು ಹೇಳಿದರು.

ಬೆಲೆ ಏರಿಕೆಗೆ ತಕ್ಕಂತೆ ಇಂದು ಕಾರ್ಮಿಕರ ವೇತನ ಹೆಚ್ಚಳವಾಗಿಲ್ಲ. ಇಂಧನ ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದ್ದು, ಜನರು ತತ್ತರಗೊಂಡಿದ್ದಾರೆ. ಬಹಿರಂಗವಾಗಿ ಮತ್ತು ಚುನಾವಣೆ ಸಮಯದಲ್ಲಿ (2ನೇ ಪುಟಕ್ಕೆ)



ಗಟ್ಟಿ ಮುಟ್ಟಾದ ಜಗಜಟ್ಟಿಗಳು ಗೆಲುವಿಗಾಗಿ ಪಟ್ಟು ಸಡಿಲಿದೆ ಪಟುತ್ವ ಮೆರೆದ ಕ್ಷಣ...

### ಕುತೂಹಲದ ಜಂಗೀ ಕುಸ್ತಿಗೆ ತೆರೆ

## ದುಗ್ಗಮ್ಮನ ಮಡಿಲು ಸೇರಿದ ಬೆಳ್ಳಿ ಗದೆ

ದಾವಣಗೆರೆ, ಮಾ.20- ಬಹಳ ಕುತೂಹಲ ಮೂಡಿಸಿದ್ದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವದ ನಿಮಿತ್ತ ನಗರದ ಬೀರಲಿಂಗೇಶ್ವರ ದೇವಸ್ಥಾನದ ಆವರಣ ದಲ್ಲಿನ ಕುಸ್ತಿ ಅಖಾಡದಲ್ಲಿ ಹಮ್ಮಿಕೊಂಡಿದ್ದ ಬಯಲು ಜಂಗಿ ಕುಸ್ತಿ ಪಂದ್ಯಾವಳಿಯು ಇಂದು ಸಂಜೆ ತೆರೆ ಕಂಡಿದ್ದು, ಕೊನೆಯ ದಿನದ ಅಂತಿಮ ಪಂದ್ಯಾವಳಿಯು ಸಮಬಲ ಕಂಡು ಬೆಳ್ಳಿ ಗದೆಯು ದುಗ್ಗಮ್ಮ ದೇವಿಯ ಮಡಿಲು ಸೇರಿತು.

ಅಂತಿಮ ಪಂದ್ಯಾಟದಲ್ಲಿ ಕುಸ್ತಿ ಅಖಾಡಕ್ಕಿಳಿದಿದ್ದ ದಾವಣಗೆರೆ ಸ್ಪೋರ್ಟ್ಸ್ ಕ್ಲಬ್ ನ ಪೈಲ್ವಾನ್ ಕಾರ್ತಿಕ್ ಕಾಟೆ ಮತ್ತು ಪಂಜಾಬ್‌ನ ಪೈಲ್ವಾನ್ ಪ್ರವೀಣ್ ಕೊಹಾಲಿ ನಡುವಿನ ಸೆಣಸಾಟ ರಾತ್ರಿ 9.40ಕ್ಕೆ ಪ್ರಾರಂಭಗೊಂಡಿತು. (2ನೇ ಪುಟಕ್ಕೆ)

**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆ ಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ ಯುವತಿಯರು ಬೇಕಾಗಿದ್ದಾರೆ. ವಯಸ್ಸು - 18 To 30 ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.
Quali : ಪಿಯುಸಿ ಪಾಸ್ / ಫೇಲ್
93804 69079

**ಸೈಟು ಮಾರಾಟಕ್ಕೆ(KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 30x40 ಪಶ್ಚಿಮ ದಾವಣಗೆರೆಯಿಂದ ಮೊದಲ ಭಾಗದಲ್ಲಿ 22 ಲಕ್ಷಕ್ಕೆ
ಕಿರಣ ಬೂಸ್ನರ್ (ಏಜೆಂಟ್)
Full White Money ಕೊಡುವವರು ಮಾತ್ರ
ಸಂಪರ್ಕಿಸಿ : 98440 63409
97315 63409

**ನೆಲ ಮಳಿಗೆ ಬಾಡಿಗೆಗೆ ಇದೆ**
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786
98867-34802

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಮನ್, ಸೇಲ್ಸ್‌ಗರ್ಲ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
2 ಬೆಡ್ ರೂಂ. ಎಸ್.ಎಸ್ ಬಡಾವಣೆ 'A' ಬ್ಲಾಕ್, ಮೊದಲನೇ ಮಹಡಿಯಲ್ಲಿ ಪೂರ್ವ ಸೈಟು, ಪೂರ್ವ ಬಾಗಿಲು ಶಾಮನೂರು ರಸ್ತೆ, ಕರ್ನಾಟಕ ಬ್ಯಾಂಕ್ ಹಿಂಭಾಗ. ನಾಗಭೂಷಣ
97407 23330
92422 20342

**ಜಮೀನು ಮಾರಾಟಕ್ಕಿದೆ**
4 ಎಕರೆ ತೋಟ ಮಾಡಲಿಕ್ಕೆ ಯೋಗ್ಯವಾದ ಜಮೀನು. ಕೊಗ್ಗನೂರು ಆನಗೋಡು ಹತ್ತಿರ.
ಏಜೆಂಟ್ ಶಿವಾನಂದ
76762 44442

**ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ**
30x50 ವಿಶಾಲವಾದ 2BHK ದಕ್ಷಿಣ ಫೇಸಿಂಗ್, ಸರಸ್ವತಿ ಬಡಾವಣೆ, ಡಾಬಾ ಸ್ಟಾಪ್ ಹತ್ತಿರ.
99023 83936, 28172 14069
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 30x50 West, 30x57 East, 30x50, 30x50 South ಅಕ್ಕ-ಪಕ್ಕ, 30x40 East, 20x30 East,
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
Office work - 1
Sales- 1
Technician Service - 1
THE MOBILE SHOP
ASHOKA & AVK ROAD, DVG.
90608 83886

**ಮನೆ ಬಾಡಿಗೆಗೆ**
ಜಯನಗರದಲ್ಲಿ 15x40 ವಿಸ್ತೀರ್ಣದ ಮೊದಲ ಮಹಡಿ ಪೂರ್ವ ದಿಕ್ಕಿನಲ್ಲಿರುವ ಮನೆ ಬಾಡಿಗೆಗೆ ಇದೆ.
ಫೋ. : 94484 39639

**WANTED**
1. Analytical chemist to handle Laboratory (HPLC, GC,AAS, etc) 2. Experienced Tally operating Lady Accountant 3. Driver cum helper needed for reputed company.
Rigved Scientific Organics, Davanagere.
Whatsapp Resume and Call:
99863 66358

**Wanted**
Marketing Executive 3
Salary 8k to 10k Contact With Bio Data. Experience Preferred.
Samruddhi Ply & Hardware
Opp Uday Bazar Near T V S Showroom, Davangere.
76760 55550

**ನವೋದಯ ಪರೀಕ್ಷೆ**
ನವೋದಯ ಪರೀಕ್ಷೆಗೆ ಒಂದು ತಿಂಗಳ ಕ್ರಾಶ್ ಕೋರ್ಸ್ (ವಸತಿ ಸಹಿತ ಮತ್ತು ವಸತಿ ರಹಿತ)
ಸಂಪರ್ಕಿಸಿ : 93803 89236,
97428 29076

**ಸೈಟುಗಳು ಮಾರಾಟಕ್ಕೆ**
ಹೈಟೆಕ್ ಬಡಾವಣೆ 30x50 ಪಶ್ಚಿಮ, ಜಯನಗರ 60x40 ಪಶ್ಚಿಮ, ಭಗೀರಥ ಬಡಾವಣೆ 40x40 2 ಸೈಟು 20+23/2 x 40 ಜಯನಗರ ಹಾಸ್ಟೆಲ್ ಹತ್ತಿರ, ಕರಿಯಮ್ಮ ದೇವಸ್ಥಾನ 30x40 ಉತ್ತರ ಸೈಟು ಮಾರಾಟಕ್ಕಿದೆ.
ಏಜೆಂಟ್ : ಶಾಂತಪ್ಪ ಪೂಜಾರಿ
99647 29123

**STAFF REQUIREMENT**
Hotel Southern Star Davanagere
1) Front office Receptionist- min 2 years experience
2) House keeping supervisor- min 2 years experience
3) F&B steward - 1 year + experience
4) South Indian chef
95384 50450

**Wanted**
Wanted computer operator with tally knowledge , Matrixx home appliances (Basement shop) Near SBI & more departmental Store.
Nijalingappa layout Main road, Davanagere.

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಇಂಗ್ಲೀಷ್ ಓದಲು ಬರೆಯಲು ಬರಬೇಕು ಹಾಗೂ ಕಂಪ್ಯೂಟರ್ ಜ್ಞಾನವುಳ್ಳವರಾಗಿರ ಬೇಕು. ತಮ್ಮ ಮೂಲ ದಾಖಲಾತಿಗಳೊಂದಿಗೆ ಸಂಪರ್ಕಿಸಿ :
Call 9880042597, 8971119130
Whatsapp 7019983025

**ಶಿಕ್ಷಕರು ಬೇಕಾಗಿದ್ದಾರೆ**
ಶ್ರೀ ಗುರುಕುಲ ವಿದ್ಯಾಸಂಸ್ಥೆ, ಸಿ.ಬಿ.ಎಸ್.ಇ ಶಾಲೆ, ತುರ್ಚಘಟ್ಟ. ಗಣಿತ, ವಿಜ್ಞಾನ, ಇಂಗ್ಲಿಷ್, ಗಣಕಯಂತ್ರ ವಿಷಯದಲ್ಲಿ ಪರಿಣತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತಿ ಇರುವವರು, ಈ ನಂಬರ್‌ಗೆ ಸಂಪರ್ಕಿಸಿ.
73386 04513, 73386 04512

**ಸೈಟುಗಳು ಮಾರಾಟಕ್ಕಿವೆ**
30x40, 30x50, 40x50 ರಶ್ಮಿ ಹಾಸ್ಟೆಲ್ ಹತ್ತಿರ, ಡಾಲರ್ಸ್ ಕಾಲೋನಿಯಲ್ಲಿ, ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ 30x58 ಪೂರ್ವ ಹೊಸ ಲೇಔಟ್‌ನಲ್ಲಿ.
ಮಂಜುನಾಥ
98444 91792

**TO LET**
Office or Gowdown or Commercial Building for Rent
30 HP power speciality available
Ground Floor & II Floor 20 sqft
Opp. : Sub Register Office Behind Malabar Tyre, P.B. Road, Davangere.
98862 55308, 96111 14244

**ಪ್ರವಾಸ**
ಮೂರು ದಿನಗಳ ಕಲರ್‌ಫುಲ್ ಹೈದ್ರಾಬಾದ್ ಪ್ರವಾಸ ಏಪ್ರಿಲ್ 13 ರಂದು ಪ್ರವಾಸ ಸ್ಥಳಗಳು : ಸಲಾರ್ ಜಂಗ ಮ್ಯೂಸಿಯಂ, NTR ಗಾರ್ಡನ್, ಲುಂಬಿನಿ ಪಾರ್ಕ್, ಚಾರ್ಮಿನಾರ್, ಬಿರ್ಲಾ ಮಂದಿರ, ಸ್ನೋ ವರ್ಲ್ಡ್,ರಾಮೋಜಿ ಫಿಲಂ ಸಿಟಿ.
ಎಸ್.ಎ. ರಾಜು
94481 62499, 99455 34966
ಗೀತಾ ಟ್ರಾವೆಲ್ಸ್ ಮಹಿಳಾ ಸಮಾಜ ಕಾಂಪ್ಲೆಕ್ಸ್ ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
2BHK ನೆಲಮಹಡಿ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಕುವೆಂಪು ನಗರ, ಎಂಸಿಸಿ 'B' ಬ್ಲಾಕ್, ಎಸ್.ಎಸ್ ಮಾಲ್ ಹತ್ತಿರ. ಕಾರ್ಪೋರೇಷನ್ ವಾಟರ್, ಬೋರ್‌ವೆಲ್, ಸೋಲಾರ್ ಮತ್ತು ಕಾರ್ ಪಾರ್ಕಿಂಗ್ ಇದೆ.
ಸಂಪರ್ಕಿಸಿ : 97421 57455

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581


# ಸಾರ್ವಜನಿಕರು ತಾಲ್ಲೂಕು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಬೇಕು



**ಶಾಸಕ ರಾಮಪ್ಪ ಕಳಕಳಿ**

ಹರಿಹರ, ಮಾ.20- ಕೊಂಡಜ್ಜಿ ಗ್ರಾಮದಲ್ಲಿ ನಮ್ಮ ನಡೆ ಹಳ್ಳಿಯ ಕಡೆ ಎಂಬ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಶಾಸಕ ಎಸ್. ರಾಮಪ್ಪ ಉದ್ಘಾಟನೆ ಮಾಡಿದರು.

ಈ ವೇಳೆ ಮಾತನಾಡಿದ ಅವರು, ತಾಲ್ಲೂಕಿನಲ್ಲಿ ಜನರು ತಮ್ಮ ಕೆಲಸಗಳಿಗೆ ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲು ತಾಲ್ಲೂಕು ಆಡಳಿತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ತಮ್ಮ ಗ್ರಾಮಕ್ಕೆ ಆಗಮಿಸಿ ಸಾರ್ವಜನಿಕರ ಸಮಸ್ಯೆಗಳನ್ನು ಕೇಳಿ ಸ್ಥಳದಲ್ಲೇ ಪರಿಹಾರವನ್ನು ನೀಡುತ್ತಾರೆ. ಇದರಿಂದಾಗಿ ಸಾರ್ವಜನಿಕರು ತಾಲ್ಲೂಕು ಕಚೇರಿಗೆ ಅಲೆದಾಡುವುದು ತಪ್ಪುತ್ತದೆ ಮತ್ತು ಸಮಯ ವ್ಯರ್ಥ ವಾಗುವುದನ್ನು ತಡೆಯಬಹುದು ಹಾಗೂ ಜನರು ನೆಮ್ಮದಿ ಜೀವನ ಸಾಗಿಸಲು ದಾರಿಯಾಗು ತ್ತದೆ ಎಂದು ಹೇಳಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿದರು. ಈ ಸಂದರ್ಭದಲ್ಲಿ ಬಿಇಓ ಸಿದ್ದಪ್ಪ, ಇಓ ಗಂಗಾಧರನ್, ಬೆಸ್ಕಾಂ ಲಕ್ಷ್ಮಪ್ಪ, ತೋಟಗಾರಿಕೆ ರೇಖಾ, ಸಿಡಿಪಿಓ ನಿರ್ಮಲಾ, ಕೃಷಿ ನಾರನಗೌಡ, ಲೋಕೋಪಯೋಗಿ ಶಿವಮೂರ್ತಿ ಹಾಗೂ ಇತರರು ಹಾಜರಿದ್ದರು.

# ಮತ್ತೆ ಮನುಸ್ಮೃತಿಗೆ ಮುಂದಾದ ಕೇಂದ್ರ

(1ನೇ ಪುಟದಿಂದ) ಸರ್ಕಾರಗಳು ಹೇಳುವ ಹೇಳಿಕೆಗಳಿಗೂ ವಾಸ್ತವಕ್ಕೂ ಯಾವುದೇ ಸಂಬಂಧ ಇರುವುದಿಲ್ಲ. 2014ರ ಆದಾಯಕ್ಕೆ ಹೋಲಿಕೆ ಮಾಡಿ ನೋಡಿದರೆ ಎಲ್ಲವೂ ಹೆಚ್ಚಳವಾಗಿದೆ. ಇದರ ವಿರುದ್ಧ ಮಾತನಾಡಿದರೆ ದೇಶದ್ರೋಹ ಎನ್ನುವ ಪಟ್ಟಕಟ್ಟಿ ಪ್ರಕರಣಗಳನ್ನು ದಾಖಲು ಮಾಡಲಾಗುತ್ತಿದೆ ಎಂದು ಹರಿಹಾಯ್ದರು.

ಅಧ್ಯಕ್ಷತೆ ವಹಿಸಿದ್ದ ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಮಾತನಾಡಿ, ಕಾರ್ಮಿಕರು ಅವಿರತವಾಗಿ ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಆದರೂ ಸರ್ಕಾರ ಅವರಿಗೆ ನ್ಯಾಯಯುತವಾದ ಸೌಲಭ್ಯಗಳನ್ನು ನೀಡುವ ಬದಲಿಗೆ ಇರುವ ಹಕ್ಕುಗಳನ್ನೇ ಧಮನಿಸಲು ಮುಂದಾಗಿದೆ. ಏಕಪಕ್ಷೀಯವಾಗಿ ಕಾರ್ಮಿಕರ ಕಾನೂನುಗಳಿಗೆ ತಿದ್ದುಪಡಿ ಮಾಡಲು ಹೊರಟಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಗಳನ್ನು ಖಂಡಿಸಿ, ಕಾರ್ಮಿಕ ವರ್ಗದ ಹಕ್ಕುಗಳ ರಕ್ಷಣೆಗಾಗಿ ಮತ್ತು ಅವರ ಸೌಲಭ್ಯಗಳಿಗಾಗಿ ಒತ್ತಾಯಿಸಿ 28 ಮತ್ತು 29 ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಗಿದೆ. ದೇಶದ ಸುಮಾರು 25 ಕೋಟಿ ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ. ದೇಶದ ಎಲ್ಲ ಪ್ರಮುಖ ಕಾರ್ಮಿಕ ಸಂಘಟನೆಗಳು ಒಗ್ಗಟ್ಟಿನಿಂದ ಪಾಲ್ಗೊಳ್ಳುತ್ತಿವೆ ಎಂದರು.

ವೇದಿಕೆಯಲ್ಲಿ ಎಐಯುಟಿಯುಸಿ ರಾಜ್ಯ ಕಾರ್ಯದರ್ಶಿ ಕೆ.ವಿ.ಭಟ್, ಅಭಾಬ್ಯಾನೌ ಸಂಘದ ಜಿಲ್ಲಾಧ್ಯಕ್ಷ ಆನಂದಮೂರ್ತಿ, ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಆವರಗೆರೆ ಹೆಚ್.ಜಿ. ಉಮೇಶ್, ಆವರಗೆರೆ ಚಂದ್ರು, ರಾಜೇಂದ್ರ ಬಂಗೇರ, ಆನಂದರಾಜ್, ವಿ. ಲಕ್ಷ್ಮಣ್, ಮಂಜುನಾಥ್ ಕೈದಾಳೆ ಸೇರಿದಂತೆ ಇತರರು ಇದ್ದರು.

# ಗಡಿಮಾಕುಂಟೆ ಕೆರೆ ಅಭಿವೃದ್ಧಿ, ಪೈಪ್‌ಲೈನ್ ಕಾಮಗಾರಿಗೆ : 4 ಕೋಟಿ ರೂ. ಅನುದಾನ



**ಜಗಳೂರು ಶಾಸಕ ಎಸ್.ವಿ.ರಾಮಚಂದ್ರಪ್ಪ**

ಜಗಳೂರು, ಮಾ.20- ತಾಲ್ಲೂಕಿನ ಗಡಿಮಾಕುಂಟೆ ಕೆರೆಗೆ ನೀರು ಹರಿಸಲು ಮತ್ತು ಕೆರೆ ಅಭಿವೃದ್ಧಿ ಹಾಗೂ ಪೈಪ್‌ಲೈನ್ ಕಾಮಗಾರಿಗೆ 4 ಕೋಟಿ ರೂ. ಅನುದಾನ ನೀಡಿ ಯಾರೊಬ್ಬ ಶಾಸಕರೂ ಮಾಡದ ಅಭಿವೃದ್ಧಿಗೆ ಕ್ರಮ ಕೈಗೊಂಡಿರುವೆ ಎಂದು ಶಾಸಕ ಎಸ್.ವಿ.ರಾಮಚಂದ್ರ ಹೇಳಿದರು.

ತಾಲ್ಲೂಕಿನ ಹೊಸಕೆರೆ ಗ್ರಾಮದಲ್ಲಿ ತಾಲ್ಲೂಕು ಆಡಳಿತದಿಂದ ಹಮ್ಮಿಕೊಂಡಿದ್ದ 'ಗ್ರಾಮ ವಾಸ್ತವ್ಯ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹೊಸಕೆರೆ ಗ್ರಾಮಕ್ಕೆ ಕುಡಿಯುವ ನೀರು, ಹೊಸಕೆರೆ-ಅರಸೀಕೆರೆ ರಸ್ತೆ ಡಾಂಬರೀಕರಣ, ಜಮೀನು ರಹಿತರಿಗೆ ಕೋಟಿಗಟ್ಟಲೇ ಅನುದಾನ ಭರಿಸಿ ತಲಾ ಎರಡರಿಂದ ಮೂರು ಎಕರೆ ಜಮೀನು ನೀಡಿರುವೆ. ನನ್ನ ಆಡಳಿತಾವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ಪ್ರಚಾರ ಮಾಡದೆ ನಾನು ಸುಮ್ಮನಿರಲಾರೆ, ಹೆಮ್ಮೆಯಿಂದ ಪ್ರಚಾರಪಡಿಸುವೆ ಎಂದರು.

**ಜನರಿಗೆ ಕೊಟ್ಟ ಮಾತು ತಪ್ಪೋದಿಲ್ಲ:** ನೀರಾವರಿ ಯೋಜನೆ ಜಾರಿಗೊಳಿಸಿ ತಮ್ಮ ಆಶೀರ್ವಾದದಿಂದ ಮತ್ತೊಮ್ಮೆ ಶಾಸಕನಾಗುವ ವಿಶ್ವಾಸ ನನಗಿದೆ. ಅಭಿವೃದ್ಧಿಯೇ ಬಿಜೆಪಿ ಪಕ್ಷದ ಮಂತ್ರ ಎಂದು ಶಾಸಕರು ತಿಳಿಸಿದರು.

ತಹಶೀಲ್ದಾರ್ ಸಂತೋಷ್ ಕುಮಾರ್ ಮಾತನಾಡಿ, ಬಗರ್‌ಹುಕ್ಕುಂ ಸಾಗುವಳಿ ಚೀಟಿ ಹಾಗೂ ಅರ್ಹರಿಗೆ ವಿಧವಾ, ಸಂಧ್ಯಾ ಸುರಕ್ಷಾ ವೇತನ, ಹಕ್ಕುಪತ್ರ ವಿತರಿಸಲಾಗುವುದು. ಗ್ರಾಮದ ಜನತೆಯ ಸಮಸ್ಯೆಗಳನ್ನು ಆಲಿಸಿ, ನಂತರ ವಿವಿಧ ಇಲಾಖೆಗಳ ಪ್ರಗತಿ ಹಾಗೂ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಕಂದಾಯ ಇಲಾಖೆ, ಸಮಾಜ ಕಲ್ಯಾಣ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಸೇರಿದಂತೆ ಒಟ್ಟು 38 ಅರ್ಜಿಗಳು ಗ್ರಾಮಸ್ಥರಿಂದ ಸಲ್ಲಿಕೆಯಾದವು.

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷರು ಹಾಗೂ ಸದಸ್ಯರುಗಳು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮಹೇಶ್ವರಪ್ಪ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ರಾಣೇಬೆನ್ನೂರು ತಾಲ್ಲೂಕು ಕಜ್ಜರಿಯಲ್ಲಿ ಇಂದಿನಿಂದ ಶ್ರೀ ದ್ಯಾಮವ್ವ ದೇವಿ ಜಾತ್ರೆ



ರಾಣೇಬೆನ್ನೂರು ತಾಲ್ಲೂಕಿನ ಕಜ್ಜರಿ ಗ್ರಾಮ ದಲ್ಲಿ ಗ್ರಾಮದೇವತೆ ಶ್ರೀ ದ್ಯಾಮವ್ವ ದೇವಿಯ ಜಾತ್ರೋತ್ಸವ ಇಂದಿನಿಂದ ಪ್ರಾರಂಭವಾಗಲಿದೆ.

ಇಂದು ಶ್ರೀ ಬಸವಣ್ಣ ದೇವರ, ಶ್ರೀ ಕಲ್ಮೇಶ್ವರ, ಶ್ರೀ ಹೊಳೆ ಬಸವೇಶ್ವರ ದೇವರಿಗೆ ಅಭಿಷೇಕ ಮಾಡಿಸುವುದು ಹಾಗೂ ಅಂಕಿ ಹಾಕುವುದು, (ಸಾರು ಹಾಕುವುದು) ಹದ್ದು ಬಂಧನ, ನಾಳೆ ಮಂಗಳವಾರ ಶ್ರೀ ವೀರಭದ್ರೇಶ್ವರ ದೇವರ ಗುಗ್ಗಳ ಮಾಡುವುದು. ಸಂಜೆ ಶ್ರೀ ದೇವಿಗೆ ಉಡಿ ತುಂಬುವುದು. ಸಂಜೆ 6.30 ಕ್ಕೆ ದೇವಿಯ ಉತ್ಸವ ಊರಲ್ಲಿ ಹೊರಟು, ಚೌಕಿಮನಿಗೆ ಗದ್ದುಗೆ ಗೊಳಿಸುವುದು. ಗಟ್ಟಿ ಗಡಿಗೆ ತರುವುದು. ದಿನಾಂಕ 23ರ ಬುಧವಾರ ಶ್ರೀ ದೇವಿಯ ಉಟಗಿ ಹೊರಡಿಸುವುದು ಹಾಗೂ ಜಾತ್ರೆ ಮಾಡುವುದು. ದಿನಾಂಕ 24 ರ ಗುರುವಾರ ಭಕ್ತರಿಗೆ ಹುಲಸಿನ ಕಾಳು ವಿತರಣೆ, ನಂತರ ಗಡಿಗೆ ಹೊರಡುವುದು. ದಿನಾಂಕ 25 ರ ಶುಕ್ರವಾರ ಶ್ರೀ ದೇವಿಯನ್ನು ಮುತ್ತೈದೆ ಮಾಡುವುದು ಹಾಗೂ ಗುಡಿ ತುಂಬಿಸುವುದು.

# ವರಸಿದ್ಧಿ ವಿನಾಯಕ ದೇವಸ್ಥಾನದ ವಾರ್ಷಿಕೋತ್ಸವ

**ನಗರದಲ್ಲಿ ಇಂದು**

ಚನ್ನಗಿರಿ ರಂಗಪ್ಪ ಗಡಿಯಾರ ಕಂಬದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ 22ನೇ ವಾರ್ಷಿಕೋತ್ಸವ ಇಂದು ಜರುಗಲಿದೆ. ಬೆಳಿಗ್ಗೆ ಸ್ವಾಮಿಗೆ ರುದ್ರಾಭಿಷೇಕ, ಕಬ್ಬಿನ ಹಾಲಿನ ಅಭಿಷೇಕ ಮತ್ತು ನವಗ್ರಹ ಹೋಮ, ಶ್ರೀ ಮಹಾಲಕ್ಷ್ಮಿ ಹೋಮ, ಮೋದಕದಿಂದ ಗಣಪತಿ ಹೋಮ ನಂತರ ಅಲಂಕಾರ ನಡೆಯುವು ದು. ಸಂಜೆ ಸಂಕಷ್ಟಹರ ಗಣಪತಿ ವ್ರತ ನಿಮಿತ್ತ ಪೂಜೆ ಮಾಡಲಾಗುವುದು.


**ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ**
ಸಂಬಳ 9000, ಊಟ, ರೂಂ ಉಚಿತ
ಸಂಪರ್ಕಿಸಿ :
97400 98064, 97400 98047

**ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ**
35x42 ಅಳತೆಯ 60 ಅಡಿ ರಸ್ತೆ, ನಿಟುವಳ್ಳಿ ಮೇನ್ ರೋಡಿಗೆ, ಕೆ.ಬಿ. ಬಡಾವಣೆಯಲ್ಲಿ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ.
98440 15114, 83100 73553

**WANTD FEMALE TEACHERS**
NTC -04, D-Ed 04, B.A., B.Ed-04, B.Sc., B.Ed. -04,
Office Admin -01
B.com., Computer Knowledge
Aya - 02.
Contact to VINAYAKA CONVENT, Ganeshpet, Kalikadevi Road, Davangere.
95356 10817

**Dull in Maths**
Junior Abacus (UKG to 3rd std ) Vedic Maths (4th STD to 10th std)Bruit Abacus and Vedic maths
Nijalingappa Badavane
M : 9739066956

**ಮ್ಯಾಟ್ರಿಮೋನಿ**
ಯಾವುದೇ ಜಾತಿಯ ವಧು-ವರರ ಪ್ರೊಫೈಲ್‌ಗಳನ್ನು ನಮ್ಮ "DJSeva" App ನಲ್ಲಿ ಪೋಸ್ಟ್ ಮಾಡಿರಿ ಮತ್ತು ನಿಮ್ಮಿಷ್ಟದ ಪ್ರೊಫೈಲ್‌ಗಳಿಗೆ ನೇರವಾಗಿ ಸಂಪರ್ಕಿಸಿ. ಮಧ್ಯವರ್ತಿಗಳಿಲ್ಲ, ಬ್ರೋಕರೇಜ್ ಇಲ್ಲ. ಸಂಪರ್ಕಿಸಿ.
99028 47517, 70194 48109

**ಬೇಕಾಗಿದ್ದಾರೆ**
ಪ್ಲೈವುಡ್ ಹಾಗೂ ಹಾರ್ಡ್‌ವೇರ್ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ :
98865 11185


**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಸೈಟುಗಳು ಮಾರಾಟಕ್ಕಿವೆ**
1) 65x147 East ಗ್ಲಾಸ್ ಹೌಸ್ ಹತ್ತಿರ, SSM ಎನ್‌ಕ್ಲೇವ್‌ನಲ್ಲಿ . 2) 70x63 ಕಾರ್ನರ್ ಡಾಲರ್ಸ್ ಕಾಲೋನಿಯಲ್ಲಿ. 3) 40x56 North ಆಂಜನೇಯ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ನ್ಯೂ ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ (ರಿ)**
ಸೇವೆಗಳು:
* 24 ಗಂಟೆ ಕೇರ್ ಟೇಕಿಂಗ್
* ಸ್ಪೆಷಲ್ ರೂಮ್ಸ್ ವಿತ್ ಅಟ್ಯಾಚ್ ಬಾತ್ ರೂಂ * ಶುಚಿ & ರುಚಿಯಾದ ಊಟ, ಇನ್ನೂ ಇತ್ಯಾದಿ ಸೇವೆಗಳನ್ನು ನೀಡಲಾಗವುದು.
ಮನೆಯಲ್ಲಿ ನೋಡಿಕೊಳ್ಳಲಾಗದ ಮತ್ತು ನಿವೃತ್ತಿ ಹೊಂದಿರುವ ವಯೋವೃದ್ಧರಿಗೆ ಮೇಲೆ ಸೂಚಿಸಿರುವ ಸೇವೆಗಳನ್ನು ನೀಡಿ, ಅವರಿಗೆ ಉತ್ತಮ ಆರೈಕೆ ಮಾಡಲಾಗವುದು. ಸಂಪರ್ಕಿಸಿ
89711 92936
76250 15036

**Required for**
Godrej
SALESMAN
LADIES FOR OFFICE WORK
Age limit: 22 years, Qul : SSLC
Preferably old city Davangere
Candidates attractive salary
Jain Enterprises
Chowkipet Chigateri Galli, Back side to old BSC., Opp Axis Bank, Davangere - 01
98445 55551
98445 09222


# ಬಲೆಗೆ 2 ಕರಡಿಗಳು ಸೆರೆ



(1ನೇ ಪುಟದಿಂದ) ನಿವಾಸಿಗಳು ತಿಳಿಸಿದ್ದಾರೆ.

ಬೆಳಿಗ್ಗೆ ಅಡಿಕೆ ತೋಟದ ಬಳಿ ತೆರಳುತ್ತಿದ್ದ ರೈತರು ಕರಡಿಗಳ ಕಿರುಚಾಟ ಕೇಳಿ ತಕ್ಷಣ ಹೊನ್ನಾಳಿಯ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಹೊಳೆ ಅರಳಹಳ್ಳಿ ಗ್ರಾಮದ ಅಡಿಕೆ ತೋಟಕ್ಕೆ ತೆರಳಿದ ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ ಜಿ.ಜಿ. ಶಿವಯೋಗಿ, ಬರ್ಕತ್ ಅಲಿ ಹಾಗು ಇತರರು ಕರಡಿಗಳನ್ನು ಸುರಕ್ಷಿತವಾಗಿ ಸಾಗಿಸಲು ಮುಂದಾಗಿದ್ದಾರೆ. ಆದರೆ, ಕಾರ್ಯಾಚರಣೆ ಸಾಧ್ಯವಾಗದ ಹಿನ್ನೆಲೆಯಲ್ಲಿ ಶಿವಮೊಗ್ಗದ ಅರಿವಳಿಕೆ ತಜ್ಞ ಡಾ. ವಿನಯ್ ಅವರನ್ನು ಕರೆಸಿ, ಅರಿವಳಿಕೆ ಮದ್ದು ಕೊಡಿಸಿದ್ದಾರೆ. ಪ್ರಜ್ಞೆ ತಪ್ಪಿದ ಕರಡಿಗಳನ್ನು ಟ್ರ್ಯಾಕ್ಟರ್ ಮೂಲಕ ಭಾನುವಾರ ರಾತ್ರಿ 7.30ಕ್ಕೆ ದಾವಣಗೆರೆ ಸಮೀಪದ ಆನಗೋಡಿನ ಇಂದಿರಾ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯಕ್ಕೆ ಸಾಗಿಸಿದ್ದಾರೆ.

ನಂತರ ಸಂಜೆ 5 ಗಂಟೆಗೆ ಗುಡ್ಡದಲ್ಲಿ ಕರಡಿ ಕಾಣಿಸಿತು ಎಂಬ ವಿಷಯ ಬಹಿರಂಗಗೊಂಡು ಜನರು ಭೀತಿಗೊಂಡು, ಅಲ್ಲಿಯೇ ಸಮೀಪದಲ್ಲಿದ್ದ ಐದಾರು ಮನೆಯವರು ಮನೆ ತೊರೆದು ಗ್ರಾಮದ ಕಡೆ ಬರಲು ಮುಂದಾಗಿದ್ದು ಅರಣ್ಯ ಸಿಬ್ಬಂದಿಗಳು ಯಾರೂ ಆ ಪ್ರದೇಶದ ಸಮೀಪ ಓಡಾಡದಂತೆ ಮನವಿ ಮಾಡಿದ್ದು ಗ್ರಾಮಸ್ಥರಲ್ಲಿ ಹೆಚ್ಚು ಭೀತಿ ಉಂಟುಮಾಡಿದೆ.

ಸ್ಥಳಿಯ ನಿವಾಸಿ ದಾದಾಪೀರ್ ಮಾತನಾಡಿ, ಜನರಲ್ಲಿ ಇಂದಿನ ಘಟನೆ ಭೀತಿ ಹಾಗು ಆಂತಕ ಸೃಷ್ಟಿಸಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರೆ, ರೈತ ಮುಖಂಡ ಬಸವರಾಜಪ್ಪ ಎಂಬುವವರು ಬೆಳಿಗ್ಗೆ ಬಲೆಗೆ ಬಿದ್ದಿದ ಕರಡಿಗಳನ್ನು ಮಧ್ಯಾಹ್ನದವರೆಗೂ ಸ್ಥಳಾಂತರಿಸದೆ ಇದ್ದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ದಾವಣಗೆರೆ ಉಪವಿಭಾಗದ ಎಸಿಎಫ್ ಮೋಹನ್‌ಕುಮಾರ್, ಆರ್‌ಎಫ್‌ಓ ಎಸ್.ಕೆ. ದೇವರಾಜ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಜಿ.ಜಿ. ಶಿವಯೋಗಿ, ಬರ್ಕತ್ ಅಲಿ, ಅರಣ್ಯ ರಕ್ಷಕರಾದ ಚಾಂದ್ ಸಾಬ್, ಕೃಷ್ಣಮೂರ್ತಿ, ನಿಂಗರಾಜ್, ಅರಣ್ಯ ವೀಕ್ಷಕರಾದ ಚನ್ನಪ್ಪ, ಗಾಳೆಪ್ಪ, ಬಸವರಾಜು, ರಮೇಶ್ ಇತರರು ಕರಡಿಗಳನ್ನು ರಕ್ಷಿಸಿ, ಸಾಗಿಸುವ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ದುಗ್ಗಮ್ಮನ ಮಡಿಲು ಸೇರಿದ ಗದೆ

(1ನೇ ಪುಟದಿಂದ) ನಗರ ದೇವತೆ ದುರ್ಗಾಂಬಿಕಾ ದೇವಿ ದೇವಸ್ಥಾನ ಸಮಿತಿಯಿಂದ ನಡೆಸಲಾದ ಈ ಇಬ್ಬರು ಬಲಾಢ್ಯ ಕುಸ್ತಿ ಪೈಲ್ವಾನರುಗಳ ಸೆಣಸಾಟವು ಕುಸ್ತಿ ಪ್ರೇಮಿಗಳಲ್ಲಿ ಕುತೂಹಲ ಕೆರಳಿಸಿತ್ತು. ಸುಮಾರು ಒಂದೂವರೆ ಕೆಜಿ ತೂಕದ 25 ಸಾವಿರ ಮೌಲ್ಯದ ಬೆಳ್ಳಿ ಗದೆ ಹಾಗೂ ಒಂದು ಲಕ್ಷ ರೂ. ನಗದು ಬಹುಮಾನಕ್ಕಾಗಿ ಅಂತಿಮ ಪಂದ್ಯದಾಟ ನಡೆಯಿತು.

ಈ ಇಬ್ಬರೂ ಪೈಲ್ವಾನರೂ ಸಹ ತಮ್ಮ ಶಕ್ತಿ ಮೀರಿ ಜಯ ಸಾಧಿಸಲು 28 ನಿಮಿಷಗಳ ಕಾಲ ಕುಸ್ತಿ ಅಖಾಡದಲ್ಲಿ ಸೆಣಸಾಡಿದರಾದರೂ 10.08 ಗಂಟೆ ಸುಮಾರಿಗೆ ಗೆಲುವಿನ ಗುರಿ ಸಾಧಿಸಲು 10 ನಿಮಿಷಗಳ ಸಮಯಾವಕಾಶ ನೀಡಲಾಗಿತ್ತು. ಆಗ ಕುಸ್ತಿ ವೀಕ್ಷಕರಲ್ಲಿ ಮತ್ತಷ್ಟು ಕುತೂಹಲ ಮೂಡಿಸಿತ್ತು. 10.18 ಗಂಟೆ ಸುಮಾರಿಗೆ ಇಬ್ಬರ ಜಟಾಪಟಿ ಜೋರಾದ ಕಾರಣ ಅಂತಿಮವಾಗಿ ಪಂದ್ಯಾವಳಿ ಸಮಬಲ ಕಂಡಿತು.

ಒಟ್ಟಾರೆ 38 ನಿಮಿಷಗಳ ಕಾಲ ಈ ಇಬ್ಬರೂ ಪೈಲ್ವಾನರು ಗೆಲುವಿಗಾಗಿ ಹೋರಾಡಿದರು. ಆದರೆ ಪಂದ್ಯಾವಳಿ ಸಮಬಲ ಕಂಡ ಕಾರಣ ಒಂದು ಲಕ್ಷ ರೂ. ನಗದು ಬಹುಮಾನದಲ್ಲಿ ಇಬ್ಬರಿಗೂ ಸಮವಾಗಿ ತಲಾ 50 ಸಾವಿರ ರೂ. ನೀಡಲಾಯಿತು. ಬೆಳ್ಳಿ ಗದೆ ದುರ್ಗಾಂಬಿಕಾ ದೇವಿ ದೇವಸ್ಥಾನ ಸಮಿತಿ ಪಾಲಾಯಿತು. ಈ ಅಂತಿಮ ಪಂದ್ಯಾಟದ ರೆಫ್ರೀಗಳಾಗಿ ಪೈಲ್ವಾನರುಗಳಾದ ಖಂಡೋಜಿರಾವ್, ಯಶವಂತ್ ರಾವ್ ಜಾಧವ್, ಮಾಲತೇಶ್ ರಾವ್ ಜಾಧವ್, ವಿನಾಯಕ ಪೈಲ್ವಾನ್, ಮನೋಹರ್ ಪೈಲ್ವಾನ್, ಮಹಾಂತೇಶ್ ಪವಾರ್, ಸ್ಟಾರ್ ಮಂಜಪ್ಪ ಕಾರ್ಯ ನಿರ್ವಹಿಸಿದರು.

ಪಂಜಾಬ್ ನ ಪೈಲ್ವಾನ್ ಪ್ರವೀಣ್ ಕೊಹಾಲಿ ಸಹೋದರನಾದ ಕುಸ್ತಿ ಪೈಲ್ವಾನ್ ಸುಮಾರು 115 ಕೆಜಿ ತೂಕವುಳ್ಳ ಧರ್ಮೇಂದ್ರ ಕೊಹಾಲಿ ವಿರುದ್ಧ ಸೆಣಸಾಡಲು ಯಾವ ಪೈಲ್ವಾನರು ಮುಂದೆ ಬಾರದ ಕಾರಣ ದೇವಸ್ಥಾನ ಸಮಿತಿಯಿಂದ ಸನ್ಮಾನಿಸಿ, ಅತಿಥಿ ಸತ್ಕಾರದ ಜೊತೆಗೆ ಗೌರವ ಧನ ನೀಡಿ ಪ್ರೋತ್ಸಾಹಿಸಲಾಯಿತು.

ಮೂರು ದಿನಗಳ ಈ ಕುಸ್ತಿ ಪಂದ್ಯದಲ್ಲಿ ಮಹಾರಾಷ್ಟ್ರ, ಪಂಜಾಬ್, ದೆಹಲಿ, ಹರಿಯಾಣ, ಪೂನಾ, ಚಿಕ್ಕಮಗಳೂರು, ಗದಗ, ಶಿಕಾರಿಪುರ, ದಾವಣಗೆರೆ, ಹರಿಹರ, ಹಾವೇರಿ, ರಾಣೇಬೆನ್ನೂರು, ಚಿತ್ರದುರ್ಗ ಸೇರಿದಂತೆ ವಿವಿಧ ಭಾಗಗಳಿಂದ ಸುಮಾರು 350 ಕುಸ್ತಿ ಪೈಲ್ವಾನರು ಸೆಣಸಾಡಿದ್ದಾರೆ. ಇಂದು ಬೆಳಿಗ್ಗೆಯಿಂದ ಸಂಜೆವರೆಗೂ 150ಕ್ಕೂ ಹೆಚ್ಚು ಪೈಲ್ವಾನರು ಶಕ್ತಿ ಪ್ರದರ್ಶಿಸಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿಯ ಕುಸ್ತಿ ಪಂದ್ಯ ವೀಕ್ಷಿಸಲು ಪ್ರೇಕ್ಷಕರು, ಕುಸ್ತಿ ಪ್ರೇಮಿಗಳ ಸಂಖ್ಯೆ ಹೆಚ್ಚಾಗಿದ್ದಕ್ಕೆ ಕಿಕ್ಕಿರಿದು ಜನ ಸೇರಿದ್ದೇ ಸಾಕ್ಷಿಯಾಗಿತ್ತು. ಅಂದಾಜು 15ರಿಂದ 20 ಸಾವಿರದಷ್ಟು ಮಂದಿ ಕುಸ್ತಿ ವೀಕ್ಷಿಸಿದ್ದಾರೆ.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಧರ್ಮದರ್ಶಿ ಗೌಡ್ರು ಚೆನ್ನಬಸಪ್ಪ, ಟಿ. ದಾಸಕರಿಯಪ್ಪ, ಎಲ್.ಡಿ. ಗೋಣೆಪ್ಪ, ಪಿ. ರಾಜ್ ಕುಮಾರ್, ಬಿ. ವೀರಣ್ಣ, ಶ್ರೀನಿವಾಸ್ ದಾಸಕರಿಯಪ್ಪ, ಗಣೇಶ್ ದಾಸಕರಿಯಪ್ಪ, ರಾಜನಹಳ್ಳಿ ಶಿವಕುಮಾರ್, ವೀರೇಶ್ ಪೈಲ್ವಾನ್, ಜೆ.ಎನ್. ಶ್ರೀನಿವಾಸ್, ಜಿ.ಡಿ. ಕುಮಾರ್ ಪೈಲ್ವಾನ್, ಗಣೇಶ್ ಪೈಲ್ವಾನ್, ಜಿ.ಡಿ. ಪ್ರಕಾಶ್ ಸೇರಿದಂತೆ ಅನೇಕರು ಇದ್ದರು.


**ಪುಣ್ಯಸ್ಮರಣೆ**



ಸಂಘವಿ ಷಾ ಬಾಬುಲಾಲ್‌ಜಿ ಕಸ್ತೂರ್‌ಚಂದ್‌ಜಿ
ಜನನ : 20.03.1908 ನಿಧನ : 20.03.1978
(ಮಾಲೀಕರು : ಮೋತಿ ಚಿತ್ರಮಂದಿರ, ದಾವಣಗೆರೆ)

ನಮ್ಮ ಪೂಜ್ಯ ತಂದೆಯವರಾದ
ಸಂಘವಿ ಷಾ ಬಾಬೂಲಾಲ್‌ಜಿ ಕಸ್ತೂರ್‌ಚಂದ್‌ಜಿಯವರು
ನಮ್ಮನ್ನಗಲಿ ಇಂದಿಗೆ 44 ವರ್ಷಗಳಾದವು.
ಹಾಗೂ ನಮ್ಮ ಪೂಜ್ಯ ತಾಯಿಯವರಾದ
ಶ್ರೀಮತಿ ಲಕ್ಷ್ಮೀಬಾಯಿ
ಕೋಂ. ಸಂಘವಿ ಷಾ ಬಾಬೂಲಾಲ್‌ಜಿಯವರು
ನಮ್ಮನ್ನಗಲಿ ಇಂದಿಗೆ 26 ವರ್ಷಗಳಾದವು.
ಇವರ ಶ್ರಮ ಹಾಗೂ ಸತ್ಯವಾದ ಸಾತ್ವಿಕ ಜೀವನ ಹಾಗೂ



ಶ್ರೀಮತಿ ಲಕ್ಷ್ಮೀಬಾಯಿ ಕೋಂ. ಸಂಘವಿ ಷಾ ಬಾಬೂಲಾಲ್‌ಜಿ
ಜನನ : 1915, ನಿಧನ : 22.03.1996

ಧ್ಯೇಯಗಳು ಸದಾ ನಮಗೆ ದಾರಿದೀಪವಾಗಲೆಂದು ಹಾಗೂ ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲೆಂದು ಬೇಡುವ.
ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

ಷಾ|| ಅಶೋಕ್‌ಕುಮಾರ್ ಬಾಬೂಲಾಲ್‌ಜಿ
#623/2, 7ನೇ ಮೇನ್, ಪಿ.ಜೆ. ಬಡಾವಣೆ ದಾವಣಗೆರೆ.-577 002.


AB JEWELLERS Since 1978

ಷಾ|| ಅಶೋಕ್‌ಕುಮಾರ್ ಬಿ. ಜೈನ್
ಮಾಜಿ ಕನ್ಸಿಲಿಯೇಟರ್, ಫ್ಯಾಮಿಲಿ ಕೋರ್ಟ್, ದಾವಣಗೆರೆ.
ಮೊ : 94491-72977

ಫೋನ್ : 232894 (ಅಂಗಡಿ), 253125 (ಮನೆ)


ಶ್ರೀ ವರ್ಧಮಾನ್ ಪ್ಲೇವುಡ್ ಪಿ.ಬಿ. ರಸ್ತೆ, ದಾವಣಗೆರೆ-2
ವಲ್ಲಭ್ ಟೆಕ್ಸ್‌ಟೈಲ್ಸ್ ಕಾಯಿಪೇಟೆ, ದಾವಣಗೆರೆ-1
ಷಾ ಕುಮಾರ ಪಾಲ್ ಬಿ.ಜೈನ್ ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-2

**ಸಿದ್ದೇಶಪ್ಪ ಮಾಕನೂರು ನಿಧನ**



ದಾವಣಗೆರೆ ಶ್ರೀನಿವಾಸ ಬಡಾವಣೆ 4ನೇ ಕ್ರಾಸ್ ಹದಡಿ ರಸ್ತೆ ವಾಸಿ
ಸಿದ್ದೇಶಪ್ಪ ಮಾಕನೂರು
ಇವರು ದಿನಾಂಕ 20.3.2022ರ ಭಾನುವಾರ ಬೆಳಗಿನ ಜಾವ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 73 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.3.2022ರ ಭಾನುವಾರ ಸಂಜೆ 5 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.
ದುಃಖತಪ್ತ ಕುಟುಂಬ ವರ್ಗ
ಮೊ: 73539 96828, 76766 64052, 96112 74774


# ನಾಡಿದ್ದು ಸಿದ್ಧ ಕಣ್ಣಿನ ಹನಿ ಕಾರ್ಯಕ್ರಮ



ದಾವಣಗೆರೆ, ಮಾ.20 - ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮವು ಸ್ಥಳೀಯ ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ 23ರ ಬುಧವಾರ ಬೆಳಿಗ್ಗೆ 10 ರಿಂದ 11 ರವರೆಗೆ ನಡೆಯಲಿದೆ.

ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗ ವಹಿಸಬಹುದು.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಅವರನ್ನು ಸಂಪರ್ಕಿಸಬಹುದು.

# ಗೋಪನಾಳು ಗ್ರಾಮದಲ್ಲಿ ಇಂದು ಶಿವಜ್ಞಾನ ಮಂದಿರದ ಉದ್ಘಾಟನೆ

ದಾವಣಗೆರೆ ತಾಲ್ಲೂಕಿನ ಗೋಪನಾಳು ಗ್ರಾಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಶಿವಜ್ಞಾನ ಮಂದಿರದ ಉದ್ಘಾಟನಾ ಸಮಾರಂಭ ನಡೆಯಲಿದೆ.

ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಹಳಿಯಾಳ ಬ್ರಹ್ಮಾಕುಮಾರೀಸ್ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಪದ್ಮಾಜಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಗೋಪನಾಳು ಗ್ರಾಮ ಪಂಚಾಯತಿ ಅಧ್ಯಕ್ಷೆ ಫಾತಿಮಾ ಬೀ, ಉಪಾಧ್ಯಕ್ಷ ಗಿರೀಶ್, ಹದಡಿ ಪಿಎಸ್‌ಐ ಕೆ.ಎಸ್. ರೂಪ, ಸ್ಥಳ ದಾನಿಗಳಾದ ಡಿ.ಬಿ. ಓಂಕಾರಪ್ಪ, ಡಿ.ಬಿ. ಪರಮೇಶ್ವರಪ್ಪ, ಗ್ರಾ.ಪಂ. ಸದಸ್ಯರಾದ ಹೆಚ್.ಡಿ. ನಾಗರಾಜಪ್ಪ, ಡಿ.ಬಿ. ಕೆಂಚವೀರಪ್ಪ, ಬಿ.ಸಿ. ಮಲ್ಲಿಕಾರ್ಜುನ, ಶ್ರೀಮತಿ ಶಾಂತಮ್ಮ, ಗ್ರಾಮದ ಮುಖಂಡರಾದ ಎನ್.ಎಂ. ರಾಜಶೇಖರಯ್ಯ, ನಂಜುಂಡಪ್ಪ ಬೆಳವನೂರು, ಜಿ.ಕೆ. ಕರಿಬಸಪ್ಪ ಭಾಗವಹಿಸಲಿದ್ದಾರೆ.

# ನವೀನ್ ಕುಟುಂಬಕ್ಕೆ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡಲಿ

**ಶಾಸಕ ಪೂಜಾರ ಆಗ್ರಹ**

ರಾಣೇಬೆನ್ನೂರು, ಮಾ.20- ಉಕ್ರೇನ್ ಯುದ್ಧದಲ್ಲಿ ಮೃತಪಟ್ಟ ತಾಲೂಕಿನ ಚಳಗೇರಿ ನವೀನ್ ಮೃತ ದೇಹವನ್ನು ಭಾರತಕ್ಕೆ ತರುವಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ, ವಿದೇಶಾಂಗ ಸಚಿವ ಜೈಶಂಕರ್, ಸಂಸದೀಯ ಸಚಿವ ಪ್ರಹ್ಲಾದ ಜೋಶಿ, ಮುಖ್ಯಮಂತ್ರಿ ಬೊಮ್ಮಾಯಿ, ಸಂಸದ ಶಿವಕುಮಾರ ಉದಾಸಿ ಸಹಕಾರ ನೀಡಿದ್ದಾರೆ. ಅವರಿಗೆ ನವೀನ್ ಕುಟುಂಬ ವರ್ಗ ಹಾಗೂ ತಾಲ್ಲೂಕಿನ ಜನರ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ ಎಂದು ಶಾಸಕ ಅರುಣಕುಮಾರ ಪೂಜಾರ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನವೀನ್ ದೇಹ ತರಿಸಲು ಆತನ ತಂದೆ ಶೇಖರಪ್ಪ ಮಾಡಿದ್ದ ಮನವಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸೂಕ್ತ ರೀತಿಯಲ್ಲಿ ಸ್ಪಂದಿಸಿವೆ. ನವೀನ್ ಕುಟುಂಬಕ್ಕೆ ಈಗಾಗಲೇ ರಾಜ್ಯ ಸರ್ಕಾರ 25 ಲಕ್ಷ ರೂ. ನೀಡಿದ್ದು ಕೇಂದ್ರ ಸರ್ಕಾರ ಕೂಡ ಆರ್ಥಿಕ ನೆರವು ನೀಡಬೇಕೆಂದು ಆಗ್ರಹಿಸಿದರು. ನಾನು ವೈಯಕ್ತಿಕ ವಾಗಿ 5 ಲಕ್ಷ ನೀಡುತ್ತೇನೆ. ನವೀನ ಸಹೋದರನಿಗೆ ಉದ್ಯೋಗ ಕೊಡಿಸಲು ಮುಖ್ಯಮಂತ್ರಿಗಳು ಭರವಸೆ ನೀಡಿದ್ದು ಈ ನಿಟ್ಟಿನಲ್ಲಿ ನಾನು ಕೂಡ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ನಾಳೆ ದಿನಾಂಕ 21ರ ಸೋಮವಾರ ಬೆಳಗ್ಗೆ 3ಕ್ಕೆ ನವೀನ ಮೃತದೇಹ ಬೆಂಗಳೂ ರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸುತ್ತದೆ. ಅಲ್ಲಿ ನವೀನ್ ಸಹೋದರ ಹರ್ಷನಿಗೆ ಮೃತದೇಹವನ್ನು ಹಸ್ತಾಂತರಿಸ ಲಾಗುತ್ತದೆ. ಅಲ್ಲಿಂದ ಮೃತದೇಹವನ್ನು ನವೀನ್ ಸ್ವಗ್ರಾಮ ಚಳಗೇರಿ ಕರೆತರಲು ರಾಜ್ಯ ಸರ್ಕಾರ ಎಲ್ಲಾ ವ್ಯವಸ್ಥೆ ಮಾಡಿದೆ. ಗ್ರಾಮದಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 2ರ ವರೆಗೆ ಸಾರ್ವಜನಿಕರಿಗೆ ಮೃತದೇಹ ವೀಕ್ಷಣೆಗೆ ಅವಕಾಶ ಮಾಡಲಾಗಿದೆ. ಗ್ರಾಮಕ್ಕೆ ಸಿಎಂ, ಉಸ್ತುವಾರಿ ಸಚಿವ ಶಿವರಾಂ ಹೆಬ್ಬಾರ, ಸಿರಿಗೇರೆ ಶ್ರೀಗಳು, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಶ್ರೀಗಳು ಸೇರಿದಂತೆ ಅನೇಕ ಮಠಾಧೀಶರುಗಳು ಆಗಮಿಸಲಿದ್ದಾರೆ ಎಂದು ವಿವರಿಸಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಎಪಿಎಂಸಿ ಸದಸ್ಯ ಬಸವರಾಜ ಹುಲ್ಲತ್ತಿ, ತಹಶೀಲ್ದಾರ್ ಶಂಕರ್ ಜಿ.ಎಸ್, ಡಿವೈಎಸ್‌ಪಿ ಟಿ.ವಿ. ಸುರೇಶ್ ಸುದ್ದಿಗೋಷ್ಠಿಯಲ್ಲಿದ್ದರು.

# ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಗೃಹಿಣಿ ಜವಾಬ್ದಾರಿ ಹೆಚ್ಚಿದೆ



ದಾವಣಗೆರೆ, ಮಾ. 20- ಕುಟುಂಬ ಸಮಾಜದ ಅಡಿಗಲ್ಲು. ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಗೃಹಿಣಿ ಜವಾಬ್ದಾರಿ ಹೆಚ್ಚಿದೆ. ಕೇವಲ ನಾಲ್ಕು ಗೋಡೆಗಳಿಗೆ ಸೀಮಿತವಾಗಿದ್ದ ಮಹಿಳೆ, ಇಂದು ಕಲಾಕುಂಚದಂತಹ ವೇದಿಕೆಗಳ ಮೂಲಕ ಪ್ರತಿಭೆ ಹೊರ ಸೂಸುತ್ತಿರುವುದು ಹೆಮ್ಮೆಯ ವಿಚಾರ ಎಂದು ವಿಜಯಪುರ ಶ್ರೀ ಸಿದ್ಧೇಶ್ವರ ಸಾಹಿತ್ಯ ವೇದಿಕೆ ಸಂಸ್ಥಾಪಕರೂ, ಯುವ ಸಾಹಿತಿಯೂ ಆಗಿರುವ ಶ್ರೀಮತಿ ಗಿರಿಜಾ ಮಾಲಿ ಪಾಟೀಲ್ ಹೇಳಿದರು.

ನಗರದ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಮಹಿಳಾ ವಿಭಾಗದಿಂದ ವಿಶ್ವ ಮಹಿಳಾ ದಿನಾಚರಣೆ ಹಾಗೂ ಸಂಸ್ಥೆಯ 32 ನೇ ವಾರ್ಷಿಕೋತ್ಸವದ ಅಂಗವಾಗಿ ಇಂದು ಏರ್ಪಡಿಸಿದ್ದ ಗೃಹಿಣಿ ಸ್ಪರ್ಧೆ ವಿಜೇತರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ನಾಲ್ಕು ಗೋಡೆಗಳ ಮಧ್ಯೆ ಇದ್ದ ಮಹಿಳೆಯ ರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಕಲಾಕುಂಚ ಸಂಸ್ಥೆಯ ಕಾರ್ಯ ಯೋಜನೆಗಳೇ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

**ಗೃಹಿಣಿ ಸ್ಪರ್ಧೆ ಕಾರ್ಯಕ್ರಮದಲ್ಲಿ ವಿಜಯಪುರದ ಸಾಹಿತಿ ಗಿರಿಜಾ ಮಾಲಿ ಪಾಟೀಲ್**

ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೋಜ ಮಾತನಾಡಿ, ಮಹಿಳೆಯರಲ್ಲಿರುವ ಸುಪ್ತ ಪ್ರತಿಭೆಗಳನ್ನು ಹೊರ ತರುವಲ್ಲಿ ಕಲಾಕುಂಚ ಸಂಸ್ಥೆಯ ಶ್ರಮ ಸಾರ್ಥಕವಾದುದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರಲ್ಲದೇ ಮುಂದಿನ ದಿನಗಳಲ್ಲಿ ಗೃಹಿಣಿಯರ ಸ್ಪರ್ಧೆ ಮಾದರಿಯಲ್ಲಿ ಅಜ್ಜಿಯರ ಸ್ಪರ್ಧೆ ನಡೆಸುವಂತೆ ಸೂಚಿಸಿದರು.

ಗೃಹಿಣಿ ಸ್ಪರ್ಧೆಯಲ್ಲಿ ವಿಜೇತರಾದ ಡಾ. ದೀಪಶ್ರೀ ಪ್ರಮೋದ್ ಗುಜ್ಜರ್ (ಪ್ರಥಮ), ಲೀಲಾ ಸುಭಾಷ್ (ದ್ವಿತೀಯ), ಮಧು ಸಂಕೇತ್ ಮತ್ತು ಉಮಾ ಮಹೇಶ್ವರಿ (ತೃತೀಯ) ಇವರನ್ನು ಸ್ಮರಣಿಕೆ, ಪ್ರಮಾಣ ಪತ್ರ, ಕಿರೀಟ ಹಾಗೂ ಸೀರೆ ನೀಡುವ ಮೂಲಕ ಗೌರವಿಸಲಾಯಿತು.

ಇದೇ ವೇಳೆ ಕಿರಿಯ ವಯಸ್ಸಿನಲ್ಲಿ ಹಿರಿದಾದ ಸಾಧನೆ ಮಾಡಿದ ಪುಟಾಣಿ ನಿಹಾರಿಕಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷೆ ಹೇಮಾ ಶಾಂತಪ್ಪ ಪೂಜಾರಿ, ಸಮಾಜ ಸೇವಕಿ ಸಾವಿತ್ರ ರೇವಣಸಿದ್ದಪ್ಪ ಆನೆ ಕೊಂಡ, ಯುವ ಸಾಹಿತಿ ಮಂಜುಳಾ ಪ್ರಸಾದ್ ಬಂಗೇರ, ಚನ್ನಗಿರಿ ವಿರೂಪಾಕ್ಷಪ್ಪ ಟ್ರಸ್ಟ್ ವಂಶಸ್ಥರಾದ ರಶ್ಮಿ ಭರತ್ ಚನ್ನಗಿರಿ, ಸಂಸ್ಥೆಯ ಗೌರವಾಧ್ಯಕ್ಷೆ ವಾಸಂತಿ ಮಂಜುನಾಥ್, ಜ್ಯೋತಿ ಗಣೇಶ್ ಶೆಣೈ, ಸುನಂದಾದೇವಿ ಜಂಬನಗೌಡ, ಗಿರಿಜಮ್ಮ ನಾಗರಾಜ್, ಶೈಲಾ ವಿನೋದ್ ಮತ್ತಿತರರು ಉಪಸ್ಥಿತರಿದ್ದರು.

ಕಲಾಕುಂಚ ಸಂಸ್ಥೆ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಕಾರ್ಯಕ್ರಮ ನಿರೂಪಿಸಿದರು.

# ಒಲಂಪಿಯಾಡ್ ಶಾಲೆಯಲ್ಲಿ ವಿಜ್ಞಾನ ವಸ್ತು ಪ್ರದರ್ಶನ



ದಾವಣಗೆರೆ, ಮಾ.20- ನಗರದ ಒಲಂಪಿಯಾಡ್ ಶಾಲೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು.

ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಚೇತನ ಸಂಸ್ಥೆಯ ಕಾರ್ಯದರ್ಶಿ ಡಾ. ವಿಜಯಲಕ್ಷ್ಮಿ ವೀರಮಾಚನೇನಿ ಅವರು, ಇಂದಿನ ಆಧುನಿಕ ಯುಗದಲ್ಲಿ ವಿಜ್ಞಾನ ಅತ್ಯವಶ್ಯಕ. ಅದಕ್ಕೆ ಪೂರಕ ಎಂಬಂತೆ ನಮ್ಮ ಶಾಲೆಯ ವಿದ್ಯಾರ್ಥಿಗಳು ನವೀನ ರೀತಿಯ ವೈಜ್ಞಾನಿಕ ಹಾಗೂ ಅನ್ವೇಷಣಾತ್ಮಕ ಮಾದರಿಗಳನ್ನು ತಯಾರಿಸಿ ಪ್ರದರ್ಶನ ನೀಡಿದ್ದಾರೆ. ಇಲ್ಲಿ ಮಕ್ಕಳ ಪ್ರತಿಭೆ ಅನಾವರಣಗೊಂಡಿದೆ. ಶಿಕ್ಷಣ ಎಂದರೆ ಕೇವಲ ಓದು, ಬರಹ, ಲೆಕ್ಕವಲ್ಲ ಎಂಬುದನ್ನು ಬಿಂಬಿಸಿದ್ದಾರೆ. ಇಂದಿನ ಮಕ್ಕಳೇ ಮುಂದಿನ ಸತ್ಪ್ರಜೆಗಳಾಗಿ, ವಿಜ್ಞಾನಿಗಳಾಗಿ ದೇಶದ ಹಿರಿಮೆಯನ್ನು ಹೆಚ್ಚಿಸಬೇಕೆಂದು ಮಕ್ಕಳಿಗೆ ಕಿವಿ ಮಾತು ಹೇಳಿದರು.

ಚೇತನ ಸಂಸ್ಥೆಯ ನಿರ್ದೇಶಕ ಪವನ್‌ಕುಮಾರ್, ಧನಂಜಯ್, ಪ್ರಾಚಾರ್ಯ ಶ್ರೀನಿವಾಸಮೂರ್ತಿ ಉಪಸ್ಥಿತರಿದ್ದರು.

ವಸ್ತು ಪ್ರದರ್ಶನದಲ್ಲಿ ಗುರುತ್ವಾಕರ್ಷಣೆಯ ಬಲ, ಪವನ ವಿದ್ಯುತ್, ಜಲವಿದ್ಯುತ್, ಶಕ್ತಿಯ ಮೂಲಗಳು, ಹನಿ ನೀರಾವರಿ, ಆಧುನಿಕ ಕೃಷಿ ಪದ್ಧತಿ, ಸೌರವ್ಯೂಹ, ಮಾನವನ ಜೀರ್ಣಾಂಗ ವ್ಯವಸ್ಥೆ ಮುಂತಾದ ಪ್ರದರ್ಶನಗಳು ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿದವು ಹಾಗೂ ಚೇತನ ಕುಡಿಗಳಿಂದ ವಿಭಿನ್ನ ರೀತಿಯ ನೃತ್ಯಗಳು ಪೋಷಕರ ಮನರಂಜಿಸಿದವು.

## 'ವೈ' ಹಂತದ ಭದ್ರತೆ

**(1ನೇ ಪುಟದಿಂದ)** ನೀಡಲಾಗಿದೆ. ಆದರೂ, ಢೋಂಗಿ ಸೆಕ್ಯುಲರ್‌ವಾದಿಗಳು ದನಿ ಎತ್ತುತ್ತಿಲ್ಲ. ಸಮಾಜದ ಒಂದು ವರ್ಗವನ್ನು ಓಲೈಸುವುದು ಸೆಕ್ಯುಲರ್ ವಾದವಲ್ಲ, ಅದು ನಿಜವಾದ ಕೋಮುವಾದ ಎಂದು ಬೊಮ್ಮಾಯಿ ಕಿಡಿ ಕಾರಿದ್ದಾರೆ. ನ್ಯಾಯಾಂಗದ ಕಾರಣದಿಂದಾಗಿ ಕಾನೂನು ವ್ಯವಸ್ಥೆ ಕಾಪಾಡಲು ಸಾಧ್ಯವಾಗಿದೆ. ನ್ಯಾಯಾಂಗ ವ್ಯವಸ್ಥೆಗೆ ಸವಾಲೆಸೆದರೆ, ಅದು ನಮ್ಮ ಪ್ರಜಾಪ್ರಭುತ್ವಕ್ಕೇ ಬೆದರಿಕೆ ಎಂದು ಬೊಮ್ಮಾಯಿ ಹೇಳಿದ್ದಾರೆ.

## ನಗರದಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟ

ರಾಜ್ಯ ಸರ್ಕಾರಿ ನೌಕರರ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 10 ಕ್ಕೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಉದ್ಘಾಟನೆ : ಸಚಿವ ಬಿ.ಎ ಬಸವ ರಾಜ್, ಅಧ್ಯಕ್ಷತೆ: ಎಸ್.ಎ ರವೀಂದ್ರ ನಾಥ್, ಅತಿಥಿಗಳು: ಜಿ.ಎಂ ಸಿದ್ದೇಶ್ವರ, ಡಾ. ವೈ. ಎ ನಾರಾಯಣಸ್ವಾಮಿ, ಎಂ.ಪಿ ರೇಣುಕಾಚಾರ್ಯ, ಕೆ. ಮಾಡಾಳ್ ವಿರುಪಾಕ್ಷಪ್ಪ, ಎಸ್.ವಿ ರಾಮಚಂದ್ರ, ಎನ್. ಲಿಂಗಣ್ಣ, ಶಾಮನೂರು ಶಿವಶಂಕರಪ್ಪ ಮತ್ತು ಎಸ್.ರಾಮಪ್ಪ.

## ಮಲೇಬೆನ್ನೂರಿನಲ್ಲಿಂದು

ಬಸವ ಬಳಗ ಮತ್ತು ಅಕ್ಕನ ಬಳಗ ಸೇವಾ ಸಂಸ್ಥೆ ವತಿಯಿಂದ ದಾನಿಗಳ ನೆರವಿನಿಂದ ಬಸವ ಮಂಟಪ ಕಟ್ಟಡ ನಿರ್ಮಾಣಕ್ಕೆ ಇಂದು ಬೆಳಿಗ್ಗೆ 10.30ಕ್ಕೆ ಭೂಮಿ ಪೂಜೆ ಹಮ್ಮಿಕೊಳ್ಳಲಾಗಿದೆ ಎಂದು ಸೇವಾ ಸಂಸ್ಥೆ ಅಧ್ಯಕ್ಷ ವೈ. ನಾರೇಶಪ್ಪ ತಿಳಿಸಿದರು.

ಸಾನ್ನಿಧ್ಯ : ಶ್ರೀ ಶಿವಮೂರ್ತಿ ಮುರುಘಾ ಶರಣರು, ಶ್ರೀ ಪಂಡಿತಾ ರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶ್ರೀ ಬಸವ ಜಯಮೃತ್ಯುಂ ಜಯ ಸ್ವಾಮೀಜಿ, ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಡಾ. ಗಂಗಾ ಮಾತಾಜಿ, ಶ್ರೀ ಶಾಂತಭೀಷ್ಮ ಸ್ವಾಮೀಜಿ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಸ್ವಾಮೀಜಿ, ಮಾಚಿದೇವ ಸ್ವಾಮೀಜಿ, ಕುಂಬಾರ ಗುರುಪೀಠದ ಸ್ವಾಮೀಜಿ. ಅತಿಥಿಗಳು : ಶಾಮನೂರು ಶಿವಶಂಕರಪ್ಪ, ಜಿ.ಎಂ. ಸಿದ್ದೇಶ್ವರ, ಎಸ್. ರಾಮಪ್ಪ, ಎಸ್. ರುದ್ರೇಗೌಡ, ಮೋಹನ್ ಕುಮಾರ್ ಕೊಂಡಜ್ಜಿ, ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್.

# ಸಗಟು ಡೀಸೆಲ್ ಬೆಲೆ 25 ರೂ. ಹೆಚ್ಚಳ

**(1ನೇ ಪುಟದಿಂದ)** ಮಾರಾಟ ಕಂಪನಿಗಳು ನಷ್ಟಕ್ಕೆ ಗುರಿಯಾಗುವಂತಾಗಿದೆ. ವಿಶೇಷವಾಗಿ ಖಾಸಗಿ ತೈಲ ಮಾರಾಟ ಕಂಪನಿಗಳಾದ ನಯಾರ ಎನರ್ಜಿ, ಜಿಯೋ - ಬಿಪಿ ಹಾಗೂ ಶೆಲ್‌ಗಳು ನಷ್ಟಕ್ಕೆ ಗುರಿಯಾಗಿವೆ.

ಕಳೆದ 136 ದಿನಗಳಿಂದ ಕೇಂದ್ರ ಸರ್ಕಾರದ ತೈಲ ಕಂಪನಿಗಳು ಡೀಸೆಲ್ ಬೆಲೆಯಲ್ಲಿ ಬದಲಾವಣೆ ಮಾಡಿಲ್ಲ. ಇದರಿಂದಾಗಿ ಖಾಸಗಿ ಕಂಪನಿಗಳೂ ಸಹ ಡೀಸೆಲ್ ಬೆಲೆ ಹೆಚ್ಚಿಸಿಲ್ಲ. ಇದರಿಂದಾಗಿ ಖಾಸಗಿ ಕಂಪನಿಗಳು ತೀವ್ರ ನಷ್ಟಕ್ಕೆ ಗುರಿಯಾಗಿವೆ. ಪರಿಸ್ಥಿತಿ ಹೀಗೆಯೇ ಮುಂದುವ ರೆದರೆ, ತೈಲ ಮಾರುವ ಬದಲು ಬಂದ್ ಮಾಡಿಕೊಳ್ಳು ವುದೇ ಉತ್ತಮ ಎಂದು ಖಾಸಗಿ ತೈಲ ವಿತರಕ ಕಂಪನಿಗಳು ಹೇಳುತ್ತಿವೆ ಎಂದು ಮೂಲಗಳು ತಿಳಿಸಿವೆ.

2008ರಲ್ಲೂ ಇದೇ ರೀತಿಯ ಪರಿಸ್ಥಿತಿ ಉಂಟಾಗಿತ್ತು. ಸರ್ಕಾರಿ ವಲಯದ ತೈಲ ಕಂಪನಿಗಳು ಸಬ್ಸಿಡಿ ದರದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮಾರುತ್ತಿದ್ದವು. ಅವುಗಳ ಜೊತೆ ಸ್ಪರ್ಧೆ ನಡೆಸಲಾಗದೇ ರಿಲೈಯನ್ಸ್ ಇಂಡಸ್ಟ್ರೀಸ್ ತನ್ನ ಎಲ್ಲಾ 1,432 ಪೆಟ್ರೋಲ್ ಪಂಪ್‌ಗಳನ್ನು ಮುಚ್ಚಿತ್ತು.

ಸಗಟು ಖರೀದಿದಾರರು ಪೆಟ್ರೋಲ್ ಪಂಪ್‌ಗಳಿಂದ ಖರೀದಿ ಮುಂದುವರೆಸಿದರೆ ಈಗ ಮತ್ತೆ ಅದೇ ಪರಿಸ್ಥಿತಿ ಬರಲಿದೆ ಎಂದು ಮೂಲಗಳು ತಿಳಿಸಿವೆ.

ಮುಂಬೈನಲ್ಲಿ ಸಗಟು ಡೀಸೆಲ್ ಬೆಲೆ ಲೀಟರ್‌ಗೆ 122.05 ರೂ.ಗಳಿಗೆ ತಲುಪಿದೆ. ಆದರೆ, ಇದೇ ಡೀಸೆಲ್ ಅನ್ನು ಪೆಟ್ರೋಲ್ ಪಂಪ್‌ಗಳಲ್ಲಿ ಲೀಟರ್‌ಗೆ 94.14 ರೂ.ಗಳಿಗೆ ಮಾರಲಾಗುತ್ತಿದೆ.


ದೆಹಲಿಯಲ್ಲಿ ಸಗಟು ಡೀಸೆಲ್ ಬೆಲೆ ಲೀಟರ್‌ಗೆ 115 ರೂ. ಆಗಿದೆ. ಪೆಟ್ರೋಲ್ ಪಂಪ್‌ಗಳಲ್ಲಿ ಡೀಸೆಲ್ ಬೆಲೆ ಲೀಟರ್‌ಗೆ 86.67 ರೂ. ಆಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನವೆಂಬರ್ 4, 2021ರ ನಂತರ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಮಾಡಿಲ್ಲ. ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬೆಲೆ ಏರಿಕೆ ನಿಲ್ಲಿಸಿರುವ ಸೂಚನೆಗಳಿವೆ. ಮಾರ್ಚ್ 10ರಂದು ಮತ ಎಣಿಕೆ ಪೂರ್ಣಗೊಂಡಿದೆ. ಆದರೆ, ಇದೇ ವೇಳೆ ಬಜೆಟ್ ಅಧಿವೇಶನದ ಎರಡನೇ ಅವಧಿ ಆರಂಭವಾಗಲಿದೆ. ಹೀಗಾಗಿ ಸದ್ಯಕ್ಕೆ ಚಿಲ್ಲರೆ ತೈಲ ಬೆಲೆ ಹೆಚ್ಚಾಗುವ ಸಾಧ್ಯತೆ ಇಲ್ಲ ಎನ್ನಲಾಗುತ್ತಿದೆ.

ಸಗಟು ಹಾಗೂ ಚಿಲ್ಲರೆ ಮಾರಾಟ ಬೆಲೆಯಲ್ಲಿ ತೀವ್ರ ಅಂತರವಾಗಿರುವುದರಿಂದ, ಸರ್ಕಾರಿ ಬಸ್‌ಗಳು, ಖಾಸಗಿ ಮಾಲ್ ಸೇರಿದಂತೆ ಹಲವಾರು ಸಂಸ್ಥೆಗಳು ಸಗಟು ಬದಲು ತೈಲ ಪಂಪ್‌ಗಳಲ್ಲಿ ಡೀಸೆಲ್ ಖರೀದಿ ಸುತ್ತಿವೆ. ಕೆಲ ಕೈಗಾರಿಕೆಗಳೂ ಸಹ ಸಗಟು ಖರೀದಿ ಕೈ ಬಿಟ್ಟಿವೆ. ಪೆಟ್ರೋಲ್ ಹಾಗೂ ಡೀಸೆಲ್ ಅನ್ನು ವೆಚ್ಚಕ್ಕಿಂತ ಕಡಿಮೆ ಮಾರಾಟ ಮಾಡುತ್ತಿರುವುದರಿಂದ ನಷ್ಟಕ್ಕೆ ಗುರಿಯಾಗಿರುವ ತೈಲ ಕಂಪನಿಗಳು, ಈಗ ಸಗಟು ಮಾರಾಟದಲ್ಲೂ ನಷ್ಟಕ್ಕೆ ಗುರಿಯಾಗಿವೆ.

## ಯಲವಟ್ಟಿ : ಬ್ರಹ್ಮಲೀನ ಸದ್ಗುರುಗಳ ಸಂಸ್ಮರಣೆ

ಮಲೇಬೆನ್ನೂರು ಸಮೀಪದ ಯಲವಟ್ಟಿ ಗ್ರಾಮದ ಶ್ರೀ ಗುರು ಸಿದ್ಧಾಶ್ರಮದ ಬ್ರಹ್ಮಲೀನ ಸದ್ಗುರುಗಳಾದ ಶ್ರೀ ಶಿವಾನಂದ ಸ್ವಾಮೀಜಿ ಮತ್ತು ಶ್ರೀ ನಿತ್ಯಾನಂದ ಸ್ವಾಮೀಜಿ ಅವರ ಪುಣ್ಯಾರಾಧನೆ ಕಾರ್ಯಕ್ರಮ ಇಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ ಎಂದು ಶ್ರೀ ಯೋಗಾನಂದ ಸ್ವಾಮೀಜಿ ತಿಳಿಸಿದ್ದಾರೆ.



ಜಡೇಸಿದ್ಧ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ, ಶ್ರೀ ಮುರುಳೀಧರ ಸ್ವಾಮೀಜಿ, ಶ್ರೀ ಶಂಕರಾನಂದ ಸ್ವಾಮೀಜಿ, ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಶ್ರೀ ಚನ್ನಬಸಮ್ಮ ತಾಯಿ ದಿವ್ಯ ಸಾನ್ನಿಧ್ಯ ವಹಿಸುವರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕರಾದ ಬಿ.ಪಿ. ಹರೀಶ್, ಹೆಚ್.ಎಸ್. ಶಿವಶಂಕರ್ ಸೇರಿದಂತೆ ಇನ್ನೂ ಅನೇಕರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ನಗರದಲ್ಲಿ ನಾಳೆ ಜಿಎಸ್‌ಟಿ ಸಭೆ

ದಾವಣಗೆರೆ, ಮಾ.20- ಜಿಎಸ್‌ಟಿ ಮತ್ತು ಜಿಎಸ್‌ಟಿಯಲ್ಲಿ ಇತ್ತೀಚೆಗೆ ಆದ ಬದಲಾವಣೆಗಳ ಬಗ್ಗೆ ಜಾಗೃತಿ ಮೂಡಿಸಲು ನಾರ್ಥ್‌ವೆಸ್ಟ್ ಕಮೀಷನರೇಟ್ ಮತ್ತು ಆಡಿಟ್ ಕಮೀಷನರೇಟ್ ಇವರು ಜಿಲ್ಲಾ ಛೇಂಬರ್ ಆಫ್ ಕಾಮರ್ಸ್ ಮತ್ತು ಕೈಗಾರಿಕಾ ಒಕ್ಕೂಟ, ಜಿಲ್ಲಾ ಲೆಕ್ಕ ಪರಿಶೋಧಕರ ಸಂಘ, ಜಿಲ್ಲಾ ತೆರಿಗೆ ಸಲಹೆಗಾರರ ಸಂಘ, ಇವರುಗಳ ಸಹಯೋಗದಲ್ಲಿ ನಾಡಿದ್ದು ದಿನಾಂಕ 22ರ ಮಧ್ಯಾಹ್ನ 3 ಗಂಟೆಗೆ ಬಾಪೂಜಿ ಎಂಬಿಎ ಕಾಲೇಜಿನ ಆಡಿಟೋರಿಯಂನಲ್ಲಿ ಔಟ್‌ರೀಚ್ ಕಾರ್ಯಕ್ರಮವನ್ನು ಕಾರ್ಯನಿರ್ವಾಹಕ ಆಯುಕ್ತ ಪ್ರದೀಪ್‌ಕುಮಾರ್ ಸುಮನ್ ಹಾಗೂ ಆಡಿಟ್ ಆಯುಕ್ತರಾದ ಎನ್.ಜೆ.ಕುಮಾರೇಶ್ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಮೋತಿ ವೀರಣ್ಣ ವಹಿಸುವರು. ಮುಖ್ಯ ಅತಿಥಿಗಳಾಗಿ ಅಥಣಿ ವೀರಣ್ಣ, ಶಂಭುಲಿಂಗಪ್ಪ, ಕಿರಣ್ ಪಾಟೀಲ್, ಜಂಬಿಗಿ ರಾಧೇಶ್, ಬಿ.ಜಿ. ಬಸವರಾಜ್, ಹೆಚ್.ಟಿ. ಸುಧೀಂದ್ರರಾವ್ ಅವರುಗಳು ಭಾಗವಹಿಸಲಿದ್ದಾರೆ.

## ನಗರಕ್ಕೆ ಇಂದು ಸಿಎಂ

**(1ನೇ ಪುಟದಿಂದ)** ಆಗಮಿಸುವರು. ನಂತರ 10.25 ಕ್ಕೆ ರಾಣೇಬೆನ್ನೂರು ತಾಲ್ಲೂಕು ಚಳಗೇರಿಗೆ ತೆರಳಿ, ಉಕ್ರೇನ್-ರಷ್ಯಾ ನಡುವಿನ ಯುದ್ಧದಲ್ಲಿ ಮೃತಪಟ್ಟ ವಿದ್ಯಾರ್ಥಿ ನವೀನ್ ಪಾರ್ಥಿವ ಶರೀರಕ್ಕೆ ಅಂತಿಮ ಗೌರವ ಸಲ್ಲಿಸಲಿದ್ದಾರೆ. ಅಲ್ಲಿಂದ ಬೆಳಿಗ್ಗೆ 11.30ಕ್ಕೆ ಹೊರಟು, 11.50ಕ್ಕೆ ಜಿ.ಎಂ.ಐ.ಟಿ ಹೆಲಿಪ್ಯಾಡ್ ತಲುಪಿ, ಮಧ್ಯಾಹ್ನ 12 ಕ್ಕೆ ಬೆಂಗಳೂರಿಗೆ ತೆರಳಲಿದ್ದಾರೆ.

**ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್**
ಬಟವಾಡಿ ವೃತ್ತ, ತುಮಕೂರು
ಫೋ: 84960 44942, 82774 09101
7.5.2022. ಮುಂಬೈ, ಶಿರಡಿ ರೈಲು ಪ್ರವಾಸ: ಅಜಂತ- ಎಲ್ಲೋರ, ಶಿರಡಿ, ತುಳಜಾಪುರ, ಶನಿಸಿಂಗಣಾಪುರ, ನಾಸಿಕ್, ಮುಂಬೈ, ಪಂಡರಾಪುರ, ಸೊಲ್ಲಾಪುರ, ಕೊಲ್ಲಾಪುರ, ತ್ರಯಂಭಕೇಶ್ವರ, ಘೃಷ್ಣೇಶ್ವರ, ಔರಂಗಾಬಾದ್, ಗೊಂದಾವಳಿ 9 ದಿನಗಳು ರೂ. 15550/-
30.5.2022 ದೆಹಲಿ, ಕಾಶಿ, ಋಷಿಕೇಶ ವಿಮಾನ ಪ್ರವಾಸ: ದೆಹಲಿ, ಆಗ್ರಾ, ಮಥುರಾ, ಅಲಹಾಬಾದ್, ಸಾರಾನಾಥ್, ಕಾಶಿ, ಋಷಿಕೇಶ, ಹರಿದ್ವಾರ, ನೈಮಿಷಾರಣ್ಯ, ಅಯೋಧ್ಯೆ. 10 ದಿನಗಳು ರೂ. 34000/-
19.6.2022 ಗುಜರಾತ್, ಮಧ್ಯ ಪ್ರದೇಶ ನಾಲ್ಕು ಜ್ಯೋತಿರ್ಲಿಂಗ ವಿಮಾನ ಪ್ರವಾಸ: ಮಹಾಕಾಳೇಶ್ವರ, ಓಂಕಾರೇಶ್ವರ, ಸೋಮನಾಥ, ನಾಗೇಶ್ವರ, ಪಟೇಲ್ ಪ್ರತಿಮೆ, ಪೋರ್ ಬಂದರ್, ಬೇಟ್ ದ್ವಾರಕ, ದ್ವಾರಕ, ಸಬರಮತಿ ಆಶ್ರಮ, ಅಕ್ಷರಧಾಮ, ನಿಷ್ಕಳಂಕ ಮಹಾದೇವ, 10 ದಿನಗಳು ರೂ.32500/-
ಮಿನರಲ್ ವಾಟರ್, ತಿಂಡಿ, ಊಟ, ಎಸಿ ರೂಂ, ಪ್ರಯಾಣ ವೆಚ್ಚ ಸೇರಿದೆ.

**ಯುಗಾದಿ ವಿಶೇಷ ಚಿಕಿತ್ಸೆ (ರಿಯಾಯಿತಿ ದರದಲ್ಲಿ)**
ವಸಂತ ಋತುವಿನ ಯುಗಾದಿ ಹಬ್ಬಕ್ಕೆ ದೇಹದ ಅಭ್ಯಂಗ (ಮಸಾಜ್), ಬಹು ಮುಖ್ಯ ಭಾಗ, ದೇಹದ ಮೂಳೆಗಳಿಗೆ, ಚರ್ಮದ ಕಾಂತಿಗೆ ಎಣ್ಣೆ ಅತ್ಯವಶ್ಯಕ. ಅದರಂತೆ 14.03.2022 ರಿಂದ 14.04.2022ರವರೆಗೆ ವಿಶೇಷ ರಿಯಾಯಿತಿಯಲ್ಲಿ ಅಭ್ಯಂಗ (ಮಸಾಜ್) ಕೇವಲ 1800 (4 ಜನರಿಗೆ) ನಿಮ್ಮ ಕುಟುಂಬಸ್ಥರು ಅಥವಾ ಆಯ್ದು 4 ಜನ ಸ್ನೇಹಿತರು ಸೇರಿ ಚಿಕಿತ್ಸೆ ಮಾಡಿಸಿಕೊಳ್ಳಬಹುದು. ಆಸಕ್ತರು ಇಂದೇ ಸಂಪರ್ಕಿಸಿರಿ.
ANVAYA
**ಅನ್ವಯ ಆಯುರ್ವೇದ ಆಸ್ಪತ್ರೆ**
#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಫೋ: 08192 252228 ಮೊ: 86186 42929

# ವರದಿಗಾರರ ಕೂಟಕ್ಕೆ ನಿವೇಶನ



**ಸಂಸದ ಸಿದ್ದೇಶ್ವರ ಭರವಸೆ**

ದಾವಣಗೆರೆ, ಮಾ. 20 – ವರದಿಗಾರರ ಕೂಟದ ಪತ್ರಿಕಾ ಭವನ ನಿರ್ಮಿಸಲು ದೂಡಾ ಮೂಲಕ ನಿವೇಶನ ಕೊಡಿಸಲು ಕ್ರಮ ತೆಗೆದುಕೊಳ್ಳುವುದಾಗಿ ಸಂಸದ ಜಿ. ಎಂ.ಸಿದ್ದೇಶ್ವರ ಭರವಸೆ ನೀಡಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ನಡೆದ ಕೂಟದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದ ಅವರು, ಕೂಟಕ್ಕೆ ನಿವೇಶನ ಕೊಡಿಸಲು ತ್ವರಿತವಾಗಿ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಇನ್ನೋರ್ವ ಮುಖ್ಯ ಅತಿಥಿಯಾಗಿ ಮಾತನಾಡಿದ ಶಾಸಕ ಶಾಮನೂರು ಶಿವಶಂಕರಪ್ಪ, ಮಾಧ್ಯಮಗಳು ಖಾವಿ, ಖಾಕಿ ಹಾಗೂ ಖಾದಿಗೆ ಎಚ್ಚರಿಕೆ ನೀಡುವ ಸಾಮರ್ಥ್ಯ ಹೊಂದಿವೆ. ಈ ಹಿನ್ನೆಲೆಯಲ್ಲಿ ಮಾಧ್ಯಮಗಳು ಸರಿಯಾದ ರೀತಿಯಲ್ಲಿ ನಡೆಯಬೇಕು ಎಂದು ಹೇಳಿದರು.

ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿ, ಕೂಟದ ಮೂಲಕ ನಿವೇಶನಕ್ಕೆ ಮನವಿ ಸಲ್ಲಿಸಲಾಗಿದೆ. ನಿವೇಶನ ಒದಗಿಸಲು ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಶಾಸಕ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ಮಾಧ್ಯಮಗಳು ಬಳಲಿವೆ. ಕೊರೊನಾ ಕಾರಣದಿಂದ ಈ ವಲಯದಲ್ಲಿ ಸಾಕಷ್ಟು ಉದ್ಯೋಗ ನಷ್ಟವಾಗಿದೆ ಎಂದು ಹೇಳಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಮಾಧ್ಯಮಗಳು ಸಮಾಜ ಸೇವೆಯ ಕೆಲಸ ಮಾಡುವುದು ದೇವರ ಕೆಲಸವಾಗುತ್ತದೆ. ಬಸವಣ್ಣನವರು ಹೇಳಿದ ಹಾಗೆ ಕಾಯಕವೇ ಕೈಲಾಸದಂತಾಗುತ್ತದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೂಟದ ಪ್ರಧಾನ ಕಾರ್ಯದರ್ಶಿ ಸಿ. ವರದರಾಜ್, ಕೂಟ ಬೆಳೆದ ಬಂದ ಹಾದಿಯನ್ನು ವಿವರಿಸಿ, ಪತ್ರಿಕಾ ಭವನ ನಿರ್ಮಾಣಕ್ಕೆ ಎಲ್ಲರ ಸಹಕಾರ ಕೋರಿದರು.

ಶಿವಮೊಗ್ಗದ ಹಿರಿಯ ಪತ್ರಕರ್ತ ಎನ್. ರವಿಕುಮಾರ್ ಟೆಲೆಕ್ಸ್ ಅವರು ಸ್ಥಳೀಯ ಪತ್ರಿಕೆಗಳು ಮತ್ತು ವೆಬ್ ಜರ್ನಲಿಸಂ ಬಗ್ಗೆ ಉಪನ್ಯಾಸ ನೀಡಿದರು.

ಕೂಟದ ನಿಕಟಪೂರ್ವ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಅವರು ನೂತನ ಅಧ್ಯಕ್ಷ ಕೆ. ಏಕಾಂತಪ್ಪ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಕೂಟದ ಖಜಾಂಚಿ ಮಧು ಕುಂದವಾಡ, ಮಾಜಿ ಅಧ್ಯಕ್ಷರಾದ ಬಸವರಾಜ ದೊಡ್ಮನಿ, ಬಿ.ಎನ್. ಮಲ್ಲೇಶ್, ಮಲ್ಲಿಕಾರ್ಜುನ ಕಬ್ಬೂರು ಮತ್ತಿತರರು ಉಪಸ್ಥಿತರಿದ್ದರು.

ಗಿರಿಜಾ ಸಿದ್ದಲಿಂಗಪ್ಪ ಪ್ರಾರ್ಥಿಸಿದರು. ದೇವಿಕಾ ಸುನೀಲ್ ನಿರೂಪಿಸಿದರು.

## ನಗರದಲ್ಲಿ ಓಶೋ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಇಂದಿನಿಂದ ಇದೇ ದಿನಾಂಕ 27 ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30 ರವರೆಗೆ ನಗರದ ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಓಶೋ ಧ್ಯಾನ ಶಿಬಿರ ನಡೆಯಲಿದೆ ಎಂದು ಅರ್ಚನಾ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

BRAIN VOLUME International
Make The Right Move
What Is D.M.I.T.?
A Revolutionary & Scientific Brain Mapping Tested ONCE IN A LIFE TIME SCIENTIFIC TEST, Acts, as Stress Booster, Confidence Booster & Provides crucial inputs for better upbringing of child & his career for Happy, Pressuse free & Successful Satisfactory life.
DISCOVER / BENEFITS
* Inborn Talent / Potential
* Multiple Inteligence
* Learning Style
* IQ, EQ, AQ & CQ
* Leadership Qualites
* Strength & Weaknesses
* Right Career option
* Persanality / Behavier
Who am I ?
* ಬಹುಮುಖ ಪ್ರತಿಭೆಗಳೇನು?
* ನಮ್ಮಲ್ಲಡಗಿರುವ ಕೌಶಲ್ಯವೇನು?
* ಪ್ರಕೃತಿದತ್ತ ವರವೇನು?
* ಸಾಮರ್ಥ್ಯ ಮತ್ತು ನ್ಯೂನತೆಗಳೇನು?
* ಜನ್ಮಜಾತ ಪಾಂಡಿತ್ಯವೇನು?
* ಕಲಿಕಾ ವಿಧಾನವೇನು?
* ನೈಸರ್ಗಿಕ ಸಿದ್ಧಿಗಳೇನು?
* ಉದ್ಯೋಗವಕಾಶಗಳೇನು?
* ದೈವದತ್ತ ಕೊಡುಗೆ ಏನು?
* ನಾಯಕತ್ವದ ಗುಣಗಳೇನು?
Contact for Testing: 9663823535, DAVANGERE

TVS SHANTHI TVS
ಮೂವತ್ತೈದನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ
ಮೆಗಾ ಡಿಸ್ಕೌಂಟ್ ಆಫರ್
5,000 ರೂ.ಗಳಿಂದ 7,000 ರೂಪಾಯಿಗಳವರೆಗೆ
35
ಕೂಡಲೆ ಸಂಪರ್ಕಿಸಿ : 9243219553

ನೋಂದಣಿ ಸಂಖ್ಯೆ 103/81-82

## ಶ್ರೀ ಮಲ್ಲಿಕಾರ್ಜುನ ವಿದ್ಯಾಸಂಸ್ಥೆ (ರಿ), ಶ್ಯಾಗಲೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ - 577002.

### ನೇಮಕಾತಿ ಪ್ರಕಟಣೆ

ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಕೆ.ಆರ್. ವೃತ್ತ ಬೆಂಗಳೂರು.ಇವರ ಆದೇಶ ಸಂಖ್ಯೆ : ಸಿ8 (4) ಖಾ.ಹು.ಭ/ 124/2019-20 ದಿನಾಂಕ 04.12.2019ರ ಹಾಗೂ ಸಂಖ್ಯೆ ಸಿ8(4) ಶಾ:ಶಿ:ಆ.ನೇ.ಅನು/30/2020-21 ದಿನಾಂಕ 09.02.2022ರ ಅನ್ವಯ ಮೇಲ್ಕಾಣಿಸಿದ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಸರ್ಕಾರದಿಂದ ಅನುದಾನಕ್ಕೆ ಒಳಪಟ್ಟಿರುವ **ಶ್ರೀಮತಿ ಕಾಂತಮ್ಮ ಗೊಡವರ್ತಿ ಸತ್ಯನಾರಾಯಣ ವಸತಿ ಪ್ರೌಢಶಾಲೆ ಕುಂಟಪಾಲನಹಳ್ಳಿ, ದಾವಣಗೆರೆ ತಾಲ್ಲೂಕು** ಮತ್ತು **ಶ್ರೀ ಕರಿಸಿದ್ದೇಶ್ವರ ವಸತಿ ಪ್ರೌಢಶಾಲೆ ಶ್ಯಾಗಲೆ, ದಾವಣಗೆರೆ ತಾಲ್ಲೂಕು** ಈ ಎರಡು **ಕನ್ನಡ ಮಾಧ್ಯಮ** ಶಾಲೆಗಳಲ್ಲಿ ದಿನಾಂಕ **31.12.2015**ರವರೆಗೆ ಖಾಲಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಕರೆಯಲಾಗಿದೆ.

| ಕ್ರ.ಸಂ | ಶಾಲೆ ಹೆಸರು | ಹುದ್ದೆಯ ವಿವರ | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ | ಮೀಸಲಾತಿ ವಿವರ | ವೇತನ ಶ್ರೇಣಿ |
|---|---|---|---|---|---|---|
| 1 | ಶ್ರೀ ಕರಿಸಿದ್ದೇಶ್ವರ ವಸತಿ ಪ್ರೌಢಶಾಲೆ ಶ್ಯಾಗಲೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ | ಸಹ ಶಿಕ್ಷಕ (ಕನ್ನಡ) | 1 | ಬಿ.ಎ., ಬಿ.ಇಡಿ ಕನ್ನಡ (ಐಚ್ಛಿಕ) | ಬಿಂದು-05 ಪ್ರವರ್ಗ -1 ಅಭ್ಯರ್ಥಿ | 33450-62600 |
| 2 | ಶ್ರೀಮತಿ ಕಾಂತಮ್ಮ ಗೊಡವರ್ತಿ ಸತ್ಯನಾರಾಯಣ ವಸತಿ ಪ್ರೌಢಶಾಲೆ ಕುಂಟಪಾಲನಹಳ್ಳಿ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ | ಸಹ ಶಿಕ್ಷಕ (ಸಿ.ಬಿ. ಜೆಡ್) | 1 | ಬಿ.ಎಸ್ಸಿ., ಬಿ.ಇಡಿ (ಸಿ.ಬಿ. ಜೆಡ್) | ಬಿಂದು-06 ಸಾಮಾನ್ಯ (ಗ್ರಾಮೀಣ) ಅಭ್ಯರ್ಥಿ | 33450-62600 |

ಅರ್ಹ ಅಭ್ಯರ್ಥಿಗಳು ತಮ್ಮ ಸಂಪೂರ್ಣ ವಿವರಗಳೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಗು 500/-ರೂ.ಗಳ ಹುಂಡಿ (ಡಿ.ಡಿ) ಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ, ಕಾರ್ಯದರ್ಶಿಗಳು ಶ್ರೀ ಮಲ್ಲಿಕಾರ್ಜುನ ವಿದ್ಯಾಸಂಸ್ಥೆ (ರಿ), ಶ್ಯಾಗಲೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರ ಹೆಸರಿನಲ್ಲಿ ಪಡೆದು ಅರ್ಜಿಯ ಜೊತೆಗೆ ಲಗತ್ತಿಸಿ ಈ ಪ್ರಕಟಣೆ ಪ್ರಕಟಗೊಂಡ 21 ದಿನಗಳೊಳಗಾಗಿ ಅರ್ಜಿಯನ್ನು ಕಾರ್ಯದರ್ಶಿಗಳಿಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಒಂದು ಪ್ರತಿಯನ್ನು ದಾಖಲೆ ಸಹಿತ ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ಇವರಿಗೆ ಸಲ್ಲಿಸಬೇಕು. ಆಯ್ಕೆಯು ಶಿಕ್ಷಣ ಕಾಯ್ದೆ 1983 ಹಾಗೂ 1999ರ ನಿಯಮದ ಅಡಿಯಲ್ಲಿ ನೇಮಿಸಿಕೊಳ್ಳಲಾಗುವುದು ಸಂದರ್ಶನದ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ಸಹಿ /- ಕಾರ್ಯದರ್ಶಿಗಳು
ಶ್ರೀ ಮಲ್ಲಿಕಾರ್ಜುನ ವಿದ್ಯಾಸಂಸ್ಥೆ (ರಿ), ಶ್ಯಾಗಲೆ
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ - 577002.

ಸ್ಥಳ : ಶ್ಯಾಗಲೆ
ಮೊ: ನಂ. 94813 09101

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಹರೀಶ್ ಟಿ. ಬಿನ್ ಹೆಚ್.ಎನ್. ತಿಪ್ಪೇಸ್ವಾಮಿ**, ವಾಸ : # 2540/2, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ. ಮೊ: ನಂ. 80734 67637 ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:

ಷೆಡ್ಯೂಲ್ ಸ್ವತ್ತನ್ನು ಈ ಹಿಂದೆ ದಿನಾಂಕ 31.05.1980ರ ನೋಂದಾಯಿತ ಕ್ರಯಪತ್ರದ ಮೂಲಕ **ಶ್ರೀಮತಿ ನಿರ್ಮಲ ಬೆಳಗಾವಿ ಕೋಂ ಎ.ಹೆಚ್. ಬೆಳಗಾವಿ** ಇವರ ಹೆಸರಿಗೆ ಆಗಿರುವ ನೋಂದಾಯಿತ ಸೇಲ್ ಸರ್ಟಿಫಿಕೇಟ್ ಮೂಲಕ ಖರೀದಿ ಮಾಡಿದಂತಹ ಸ್ವತ್ತಾಗಿದ್ದು, ಸದರಿ **ನಿರ್ಮಲ ಬೆಳಗಾವಿ** ಮತ್ತು ಅವರ ಗಂಡ **ಎ.ಹೆಚ್. ಬೆಳಗಾವಿ** ಇಬ್ಬರೂ ಸಹ ಮೃತರಾಗಿದ್ದು, ಅವರಿಗೆ ಒಟ್ಟು ಐದು ಜನ ಮಕ್ಕಳಿದ್ದು, ಆ ಪೈಕಿ **ನೀಲಮ್ಮ ಮತ್ತು ಹೆಚ್.ಎ. ಬೆಳಗಾವಿ ಮತ್ತು ಚಂದ್ರಕಾಂತ್ ಬೆಳಗಾವಿ** ಇವರು ವಿವಾಹ ಪೂರ್ವದಲ್ಲಿಯೇ ಮರಣ ಹೊಂದಿದ್ದು. ಹಾಲಿ ಷೆಡ್ಯೂಲ್ ಸೊತ್ತು ನಿರ್ಮಲ ಅವರ ಉಳಿದ ಇಬ್ಬರು ಮಕ್ಕಳಾದ **ಉಮಾಶಂಕರ್ ಬೆಳಗಾವಿ** ಮತ್ತು **ರಾಜಶೇಖರ್ ಬೆಳಗಾವಿ** ಇವರುಗಳ ಜಂಟಿ ಖಾತೆಯಲ್ಲಿ ಇರುವ ಸ್ವತ್ತಾಗಿರುತ್ತದೆ. ಅವರು ಹೇಳಿರುವ ಪ್ರಕಾರ ಅವರನ್ನು ಹೊರತುಪಡಿಸಿ ಬೇರೆ ಯಾರೂ ವಾರಸುದಾರರು ಇರುವದಿಲ್ಲ ಎಂದು ತಿಳಿಸಿರುತ್ತಾರೆ. ಮೇಲ್ಕಂಡ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಅದರ ಹಾಲಿ ಮಾಲೀಕರುಗಳಾದ ದಾವಣಗೆರೆ ಸಿಟಿ, ನರಸರಾಜ ರಸ್ತೆ, ಬೆಳಗಾವಿ ಬಿಲ್ಡಿಂಗ್‌ನಲ್ಲಿ ವಾಸವಾಗಿರು **ಎ.ಹೆಚ್. ಬೆಳಗಾವಿ** ಇವರ ಮಕ್ಕಳಾದ **ಉಮಾಶಂಕರ್ ಬೆಳಗಾವಿ** ಮತ್ತು **ರಾಜಶೇಖರ್ ಬೆಳಗಾವಿ** ಇವರುಗಳಿಂದ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನಲ್ಲಿ ಬೇರೆ ಯಾರದೇ ಅಗಲೀ ತಂಟೆ, ತಕರಾರು ಅಥವಾ ಯಾವುದೇ ರೀತಿಯ ಹಕ್ಕು ಬಾಧ್ಯತೆ ಇದ್ದಲ್ಲಿ ಮತ್ತು ಮೃತರ **ಶ್ರೀಮತಿ ನಿರ್ಮಲ ಬೆಳಗಾವಿ ಕೋಂ ಎ.ಹೆಚ್. ಬೆಳಗಾವಿ** ಇವರ ಬೇರೆ ಯಾರೇ ವಾರಸುದಾರರು ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡು ಒಂದು ವಾರದೊಳಗಾಗಿ ನನ್ನ ಕಕ್ಷಿದಾರರನ್ನಾಗಲೀ ಅಥವಾ ಕೆಳಕಂಡ ಅವರ ವಕೀಲರನ್ನಾಗಲೀ ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸತಕ್ಕದ್ದು, ಒಂದು ವಾರದೊಳಗಾಗಿ ಯಾವುದೇ ರೀತಿ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಬೇರೆ ಯಾವುದೇ ವ್ಯಕ್ತಿಗಳ ಹಕ್ಕು ಹಿತಾಸಕ್ತಿ ಒಳಪಟ್ಟಿರುವುದಿಲ್ಲ ಎಂದು ಪರಿಗಣಿಸಿ, ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳಲು ಹಕ್ಕುವುಳ್ಳವರಾಗಿರುತ್ತಾರೆ. ಆ ನಂತರ ಬಂದ ಯಾವುದೇ ತಕರಾರನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

ದಾವಣಗೆರೆ ಸಿಟಿ, 5ನೇ ವಾರ್ಡ್, ಎಂ.ಸಿ.ಸಿ 'ಎ' ಬ್ಲಾಕ್‌ನಲ್ಲಿರುವ ಸೈಟ್ ನಂ. 310, ಡೋರ್ ನಂ. 2595/10 ವಿಸ್ತೀರ್ಣ 35'x 50' ಅಡಿವುಳ್ಳ ನಿವೇಶನಕ್ಕೆ ಚಕ್ಕುಬಂದಿ: **ಪೂರ್ವಕ್ಕೆ** : ಸೈಟ್ ನಂ. 303 **ಪಶ್ಚಿಮಕ್ಕೆ** : ರಸ್ತೆ **ಉತ್ತರಕ್ಕೆ** : ಸೈಟ್ ನಂ. 309 **ದಕ್ಷಿಣಕ್ಕೆ** : ಸೈಟ್ ನಂ. 311

ಸಂಪರ್ಕಿಸ ಬೇಕಾದ ವಿಳಾಸ : **ಶ್ರೀ ಆರ್.ಟಿ. ವಿನಯ ಕುಮಾರ್,** ವಕೀಲರು
# 82/18, ಪಿ.ಬಿ. ರಸ್ತೆ, ಇಂಡಿಯನ್ ಬ್ಯಾಂಕ್ ಹತ್ತಿರ, ದಾವಣಗೆರೆ.
ಮೊಬೈಲ್ ನಂ. 98445 97838

# ವಿವೇಕವಂತರಾದರೆ ಬದುಕಿನ ತಲ್ಲಣ ಹತೋಟಿಯಲ್ಲಿಡಲು ಸಾಧ್ಯ


## ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯಕ್ರಮದಲ್ಲಿ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಮಾ. 20- ನಮ್ಮಲ್ಲಿ ಪ್ರಜ್ಞೆ ಜಾಗೃತವಾದಾಗ, ವಿವೇಕವಂತರಾದಾಗ ಬದುಕಿನ ತಲ್ಲಣಗಳು, ಸಂಕಟಗಳನ್ನು ಹತೋಟಿಯಲ್ಲಿಡಲು ಸಾಧ್ಯವಾಗುತ್ತದೆ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಸಾಹಿತ್ಯದ ಸಾರ್ಥಕತೆಯ ಚಿಂತನೆ' ಮತ್ತು ಸಂಭ್ರಮ, ಸಮೃದ್ಧಿ, ಸಾರ್ಥಕ ಸಹಪಯಣ' ಪುಸ್ತಕ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಯಾವುದೇ ಕೃತಿಗಳಿರಲಿ ಶ್ರೇಷ್ಠ, ಕನಿಷ್ಠ ಅಂತಾ ಇರುವುದಿಲ್ಲ. ಎಲ್ಲರೂ ಪುಸ್ತಕ ಬರೆಯುತ್ತಾರೆ. ಆದರೆ ಬರೆಯುವುದು ಮುಖ್ಯವಲ್ಲ. ಬರೆದಂತೆ ಬದುಕುವುದು ಮುಖ್ಯ. ನಡೆ-ನುಡಿ ಒಂದಾದಾಗ ಬರವಣಿಗೆಗೆ ಹೆಚ್ಚಿನ ಶಕ್ತಿ ಬರಲು ಸಾಧ್ಯ ಎಂದರು.

ಮನುಷ್ಯ ತಾನು ಶರಣಾಗತನಾದಾಗ ಮಾತ್ರ ಕೋಪ ಶಮನಗೊಳಿಸಿಕೊಳ್ಳಲು ಸಾಧ್ಯ. ತನ್ನಲ್ಲಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಬಿಟ್ಟು ಪ್ರೀತಿ, ಕರುಣೆ, ಶಾಂತಿ, ಸಹನೆ ಬೆಳೆಸಿಕೊಳ್ಳ ಬೇಕಾಗಿದೆ. ನಕಾರಾತ್ಮಕ ಭಾವನೆಗಳನ್ನು ಬಿಟ್ಟು, ಸಕಾರಾ ತ್ಮಕ ಭಾವನೆಗಳನ್ನು ಸ್ವೀಕಾರ ಮಾಡಬೇಕು. ಪ್ರೀತಿ, ಅಹಿಂಸೆ, ಸಂತೋಷದ ಗುಣಗಳನ್ನು ಮೈಗೂಡಿಸಿಕೊಂಡಾಗ ವ್ಯಕ್ತಿಗೆ ಶಕ್ತಿ ಬರುತ್ತದೆ ಎಂದು ಹೇಳಿದರು.



ಮನುಷ್ಯನ ಆಂತರ್ಯದಲ್ಲಿ ಬಂಗಾರದ ಗುಣವಿರುತ್ತದೆ. ಅದನ್ನು ಸದ್ಬಳಕೆ ಮಾಡಿಕೊಂಡಾಗ ಶ್ರೇಷ್ಠ ವ್ಯಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಅಲ್ಲಮ ಮತ್ತು ಬುದ್ಧ ಇವರಿಬ್ಬರ ಆಲೋಚನೆಗಳು ಏಕರೀತಿಯಲ್ಲಿವೆ. ಇವರಿಬ್ಬರು ಮದಗಜರಿದ್ದಂತೆ. ಅವರ ಬದುಕನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿದಾಗ ಅವರು ಯಾವತ್ತೂ ಕೂಡ ತುಳಿಯುವ ಕೆಲಸ ಮಾಡದೇ ಕೆಸರಲ್ಲಿದ್ದವರನ್ನೂ ಸಹ ಮೇಲೆತ್ತುವ ಕೆಲಸವನ್ನು ಮಾಡಿದವರು ಎಂದರು.

ಬುದ್ಧ ಅನೇಕರ ಬದುಕಿಗೆ ಚೈತನ್ಯ ತುಂಬಿದವರು. ಬುದ್ಧನ ಬಹುದೊಡ್ಡ ಬಂಡವಾಳ ಪ್ರೀತಿಯಾಗಿತ್ತು. ಅಲ್ಲಮ ಕೂಡ ಸಾರ್ವಜನಿಕರ ಜೊತೆ ಬೆರೆತವರು ಎಂದು ಬುದ್ಧ ಮತ್ತು ಅಲ್ಲಮರ ತಾತ್ವಿಕ ವಿಚಾರಗಳನ್ನು ತಿಳಿಸಿದರು.

ತುಮಕೂರಿನ ಸಾಹಿತಿ ಡಾ. ಎಸ್. ನಟರಾಜ್ ಬೂದಾಳ್ ಅವರು ಬುದ್ಧ ಮತ್ತು ಅಲ್ಲಮರ ತಾತ್ವಿಕ ವಿಚಾರಗಳ ಬಗ್ಗೆ ಸಮೀಕರಿಸಿ ಮಾತನಾಡಿದರು.

ಮಾಜಿ ಶಾಸಕ ಮಹಿಮಾ ಜೆ. ಪಟೇಲ್ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಪುಸ್ತಕ ಕುರಿತು ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಹಾಗೂ ರವಿಕಿರಣ ಮಾತನಾಡಿದರು.

ಡಾ.ಹೆಚ್.ಎನ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಿದ್ದರು. ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಸ್ಥಾಪಕರೂ, ಲೇಖಕರೂ ಆದ ಶಿವನಕೆರೆ ಬಸವಲಿಂಗಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಬಸವರಾಜ ಒಡೆಯರ್ ಸೇರಿದಂತೆ ಕರುಣಾ ಜೀವ ಕಲ್ಯಾಣ ಟ್ರಸ್ಟ್, ಬಸವ ಬಳಗ, ಕದಳಿ ಮಹಿಳಾ ವೇದಿಕೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ದುರ್ಗಾಂಬಿಕಾ ದೇವಿ ಜಾತ್ರೆ : ನಗರದಲ್ಲಿಂದು ಜಾನಪದ ಕಾರ್ಯಕ್ರಮ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿಯ ಜಾತ್ರೆ ಪ್ರಯುಕ್ತ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇಂದು ಸಂಜೆ 6.30ಕ್ಕೆ ಶ್ರೀ ಆತ್ಮಾನಂದ ಜಾನಪದ ಕಲಾವಿದರ ಸಂಘ (ಹುಬ್ಬಳ್ಳಿ) ಇವರಿಂದ ಜಾನಪದ ಕಾರ್ಯಕ್ರಮ ನಡೆಯಲಿದೆ.




## ಶ್ರೀ ವೀರಭದ್ರೇಶ್ವರ ರಥೋತ್ಸವ

ಹರಿಹರ ತಾಲ್ಲೂಕು ಹನಗವಾಡಿ ಗ್ರಾಮದ

**ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು**

ದಿನಾಂಕ 22.03.2022ನೇ ಮಂಗಳವಾರ ಸಂಜೆ 6 ಗಂಟೆಗೆ ವಿವಿಧ ವಾದ್ಯವೃಂದದವರಿಂದ ಜರುಗುವುದು.

ದಿನಾಂಕ 23.03.2022ನೇ ಬುಧವಾರ ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 12.30 ರವರೆಗೆ

**ಶ್ರೀ ಸ್ವಾಮಿಯ ಗುಗ್ಗಳ ಕಾರ್ಯಕ್ರಮವು**

ಶ್ರೀ ವೀರಭದ್ರೇಶ್ವರ ವೀರಗಾಸೆ ತಂಡದವರಿಂದ ಪುರವಂತರರು, ಸಮಾಳದವರು ಹಾಗೂ ವಿವಿಧ ಮೇಳಗಳಿಂದ ಊರಿನ ಪ್ರಮುಖ ಬೀದಿಗಳಲ್ಲಿ ಸಾಗಿ, ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಅಂತ್ಯಗೊಳ್ಳುವುದು. ಆದ ಕಾರಣ ಪ್ರತಿ ವರ್ಷದಂತೆ ಈ ವರ್ಷವು ಭಕ್ತಾದಿಗಳು ಆಗಮಿಸಿ, ಶ್ರೀ ವೀರಭದ್ರೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.


# ಅನ್ಯೋನ್ಯತೆಯ ಕುಟುಂಬ ಸಮಾಜಕ್ಕೆ ಮಾದರಿ

## ಜಗಳೂರು : ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ

ಜಗಳೂರು, ಮಾ. 20- ಕುಟುಂಬದ ಎಲ್ಲಾ ಸದಸ್ಯರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿ, ಎಲ್ಲರನ್ನೂ ಅನ್ಯೋನ್ಯತೆಯಿಂದ ಕಾಣುತಿದ್ದ ಜಿ.ಹೆಚ್.ಕುಸುಮ ಅವರ ಕೂಡು ಕುಟುಂಬ ಸಮಾಜಕ್ಕೆ ಮಾದರಿ ಎಂದು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಕೆಂಚಮ್ಮನಾಗ್ತಿಹಳ್ಳಿ ಗ್ರಾಮದಲ್ಲಿ ನಡೆದ ಜಿ.ಹೆಚ್.ಕುಸುಮ ಬಸವರಾಜಪ್ಪ ಅವರ ಶಿವಗಣಾರಾಧನೆ ಹಾಗೂ ಸರ್ವ ಶರಣ ಸಮ್ಮೇಳನ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಎರೆಯುವುದರ ಮೂಲಕ ಉದ್ಘಾಟಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ಮನೆಯ ಹಿರಿಯ ಸೊಸೆಯಾದ ಕುಸುಮಾರವರು 76 ಜನ ಸದಸ್ಯರು ಇರುವ ದೊಡ್ಡ ಕುಟುಂಬದಲ್ಲಿ ಎಲ್ಲರನ್ನೂ ತನ್ನ ಮಕ್ಕಳಂತೆ ಆರೈಕೆ ಮಾಡಿದ್ದರು. ಎಲ್ಲರನ್ನು ತುಂಬಾ ಆತ್ಮೀಯವಾಗಿ ನೋಡಿಕೊಂಡಿದ್ದ ದೊಡ್ಡ ಮನಸ್ಸು ಇವರದು ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾತೆ ಮಹಾದೇವಿ ಬಸವಣ್ಣವರ ವಚನಗಳನ್ನು 'ಲಿಂಗ ದೇವರು' ಅಂತ ಅಂಕಿತ ನಾಮಗಳಿಂದ ಕರೆದಿದ್ದರು. ಇದು ತಪ್ಪು ಬಸವಣ್ಣನವರ ವಚನಗಳನ್ನು ಕೂಡಲಸಂಗಮ ದೇವನೇ ಬಸವಣ್ಣನವರ ಅಂಕಿತ ನಾಮವೆಂದು ಸ್ವಾಮೀಜಿ ತಿಳಿಸಿದರು.



ಸಾಹಿತಿ ಚಟ್ನಳ್ಳಿ ಮಹೇಶ್ ಮಾತನಾಡಿ, ಬಸವಣ್ಣನವರು ಹಾಕಿಕೊಟ್ಟಿರುವ ತತ್ವ, ಸಿದ್ಧಾಂತಗಳನ್ನು ಪಾಲಿಸಿಕೊಂಡು ಎಲ್ಲರೂ ಸನ್ಮಾರ್ಗದಲ್ಲಿ ನಡೆದು ಸಾರ್ಥಕ ಜೀವನ ನಡೆಸಿರಿ ಎಂದರು.

ಕೃಷಿ ಉಪ ನಿರ್ದೇಶಕ ತಿಪ್ಪೇಸ್ವಾಮಿ ಮಾತನಾಡಿ, ಸ್ವಾಮೀಜಿಗಳ ಹೋರಾಟದಿಂದ ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಇಂದು ಎಲ್ಲರ ಜನ ಮೆಚ್ಚುಗೆಗೆ ಪಾತ್ರವಾಗಿದೆ. ಇದರಿಂದ ರೈತರಿಗೆ ನೀರಾವರಿ ಮಾಡಿಕೊಳ್ಳಲು ಅನುಕೂಲವಾಗಿದೆ.

ಮೆಕ್ಕೆಜೋಳಕ್ಕೆ ಸೀಮಿತವಾಗದೆ, ವಿವಿಧ ಧಾನ್ಯಗಳನ್ನು ಬೆಳೆಯಬೇಕು. ಸಮಸ್ಯೆ ಗಳನ್ನು ರೈತ ಸಂಪರ್ಕಕ್ಕೆ ಕೇಂದ್ರದಲ್ಲಿ ತೆರಳಿ ಬಗೆಹರಿಸಿಕೊಳ್ಳುವಂತೆ ಕರೆ ನೀಡಿದರು.

ಮಾಜಿ ಶಾಸಕ ಹೆಚ್.ಪಿ. ರಾಜೇಶ್, ಕೊಂಡಜ್ಜಿ ಜಯಪ್ರಕಾಶ್, ಐ.ಟಿ ಉದ್ಯಮಿ ಚನ್ನಪ್ಪ ಮಾತನಾಡಿದರು. ವೈ.ಕೆ. ಬಸವರಾಜಪ್ಪ, ಬಸವನಕೋಟೆ ಶೇಖರಪ್ಪ ನಿ. ಶಿಕ್ಷಕರು. ಹೊಸಕೋಟೆ ಜಾತಪ್ಪ, ಜಿ.ಪಂ ಮಾಜಿ ಸದಸ್ಯ ಎಸ್.ಕೆ.ಮಂಜುನಾಥ್, ಸಾಣೇಹಳ್ಳಿ ಕಲಾವಿದರ ತಂಡ, ಹೊಸಕೋಟೆ ಭಜನಾ ಸಂಘ, ಜಿ.ಸಿ. ಅರುಣಾ ಶಿಕ್ಷಕಿ, ಕಮ್ಮತ್ತಳ್ಳಿ ಮಂಜುನಾಥ್, ಭೈರೇಶ್, ಮುಂತಾದವರು ಹಾಜರಿದ್ದರು.

# ನಗರದಲ್ಲಿ ನಾಳೆ ಉದ್ಯೋಗ ಮೇಳ

ದಾವಣಗೆರೆ ಮಾ.20- ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯ ಮಿಷನ್ (ದಾವಣಗೆರೆ) ಇವರ ವತಿಯಿಂದ ನಾಡಿದ್ದು ದಿನಾಂಕ 22 ರ ಮಂಗಳವಾರ ಯು.ಬಿ.ಡಿ.ಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉದ್ಯೋಗ ಮೇಳ ನಡೆಯಲಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿರುವ ಜಿಲ್ಲೆಯ ಯುವಕ-ಯುವತಿಯರು ಭಾಗವಹಿಸಲು ಗೂಗಲ್ ಫೋರಂ ಲಿಂಕ್ https://tinyurl.com/bdafha6m ನಲ್ಲಿ ಮಾಹಿತಿಯನ್ನು ಭರ್ತಿಗೊಳಿಸಿ ನೋಂದಣಿ ಮಾಡಿಕೊಳ್ಳಬಹುದಾಗಿದೆ.

ವಿವರಕ್ಕೆ 8971749636 ಹಾಗೂ ಇಮೇಲ್ ವಿಳಾಸ dsmod-vg@gmail.com ಅಥವಾ ಜಿಲ್ಲಾಡಳಿತ ಭವನ, 1ನೇ ಮಹಡಿ, ಕೊಠಡಿ ಸಂಖ್ಯೆ 24, ಬಿ ಬ್ಲಾಕ್, ದಾವಣಗೆರೆ ಇಲ್ಲಿ ಸಂಪರ್ಕಿಸಿ.

# ಬಣಕಾರ್‌ಗೆ 'ಸಹಕಾರ ರತ್ನ' ಪ್ರಶಸ್ತಿ



ದಾವಣಗೆರೆ,ಮಾ.20- ಸಹಕಾರ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ಕರ್ನಾಟಕ ಸರ್ಕಾರವು ಕೊಡಮಾಡುವ 'ಸಹಕಾರ ರತ್ನ' ಪ್ರಶಸ್ತಿಗೆ ನಗರದ ಹಿರಿಯ ಸಹಕಾರಿ ಧುರೀಣರೂ ಆದ ಡಿಸಿಸಿ ಬ್ಯಾಂಕ್ ನಿರ್ದೇಶಕ ಜಗದೀಶಪ್ಪ ಬಣಕಾರ್ ಭಾಜನರಾಗಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದಿಂದ ಬೆಂಗಳೂರಿನಲ್ಲಿ ಇಂದು ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಗದೀಶಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.


## ಚಿರಸ್ಮರಣೆ



**ದಿ|| ಶ್ರೀ ಮಲ್ಲಿಕಾರ್ಜುನಯ್ಯ ಟಿ.ಎಂ.**

K.E.B. ನಿಟ್ಟುವಳ್ಳಿ, ದಾವಣಗೆರೆ.

ಜನನ : 15.7.1953, ಮರಣ : 21.3.2001

ನೀವು ನಮ್ಮನ್ನಗಲಿ ಇಂದಿಗೆ 22 ವರ್ಷಗಳಾದವು... ನಿಮ್ಮ ನೆನಪುಗಳೇ ನಮಗೆ ದಾರಿದೀಪವಾಗಿವೆ. ಸದಾ ನಿಮ್ಮ ಸ್ಮರಣೆಯಲ್ಲಿ ಮುನ್ನಡೆಯುತ್ತಿರುವ...

ಪತ್ನಿ: ದ್ರಾಕ್ಷಾಯಣಮ್ಮ, ಹಿರಿಯ ಮಗ:ಜೀವರಾಜಯ್ಯ ಟಿ.ಎಂ., ಬೆಸ್ಕಾಂ ಸೊಸೆ:ದೀಪಾ ಟಿ.ಎಂ., ಮಗಳು : ರಾಜೇಶ್ವರಿ ಟಿ.ಎಂ., ಅಳಿಯ : ಉಮೇಶ್, ಕೆಎಸ್‌ಆರ್‌ಟಿಸಿ, ಕಿರಿಯ ಮಗ : ಶಾಂತಯ್ಯ ಟಿ.ಎಂ., ಸೊಸೆ : ಮೇಘಾ ಟಿ.ಎಂ., ಕಿರಿಯ ಮಗ : ಶಿವಯ್ಯ ಟಿ.ಎಂ., ಸೊಸೆ : ರಂಜಿತಾ ಟಿ.ಎಂ., ಮೊಮ್ಮಕ್ಕಳಾದ : ಕಾರ್ತಿಕ್, ಕಾಂಚನ, ದುರ್ಗಾಶ್ರೀ, ಸೋಮಶೇಖರ್, ಸಿದ್ಧಾಂತ್, ತೇಜಸ್, ಅಮೃತಾ ಮತ್ತು ಕುಟುಂಬ ವರ್ಗ, ಲಿಂಗಾಯತರ ಕೋಟೆ, ನಿಟ್ಟುವಳ್ಳಿ, ದಾವಣಗೆರೆ.


# ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ದರ್ಶನ ಪಡೆದ ಎಸ್ಸೆಸ್



ನಾಯಕನಹಟ್ಟಿ, ಮಾ.20- ಸುಕ್ಷೇತ್ರ ನಾಯಕನಹಟ್ಟಿಯಲ್ಲಿ ಭಾನುವಾರ ನಡೆದ ಶ್ರೀ ತಿಪ್ಪೇರುದ್ರಸ್ವಾಮಿಯ ರಥೋತ್ಸವದ ಸಂದರ್ಭದಲ್ಲಿ ಹಿರಿಯ ಶಾಸಕರೂ, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರು ಸ್ವಾಮಿಯ ದರ್ಶನ ಪಡೆದರು. ಅಖಿಲ ಭಾರತ ವೀರಶೈವ ಮಹಾಸಭಾದ ಉಪಾಧ್ಯಕ್ಷರುಗಳಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ ಮತ್ತು ಇತರರು ಎಸ್ಸೆಸ್ ಅವರೊಂದಿಗಿದ್ದರು.

# ಕುಂಬಳೂರಿನಲ್ಲಿ ಶ್ರದ್ಧಾ - ಭಕ್ತಿಯ ಮುಳ್ಳೋತ್ಸವಕ್ಕೆ ಅಪಾರ ಭಕ್ತರು



ಮಲೇಬೆನ್ನೂರು, ಮಾ. 20 - ಕುಂಬಳೂರಿನ ಆರಾಧ್ಯ ದೈವ ಶ್ರೀ ಹನುಮಂತ ದೇವರ ಮಹಾರಥೋತ್ಸವ ಭಾನುವಾರ ಬೆಳಗಿನ ಜಾವ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು. ವಿವಿಧ ಕಲಾ-ಮೇಳಗಳು ರಥೋತ್ಸವಕ್ಕೆ ಮೆರುಗು ತಂದವು. ಬೆಳಿಗ್ಗೆ ಸಾಮೂಹಿಕ ವಿವಾಹ ನಡೆಯಿತು. ಸಂಜೆ ಶ್ರೀ ಸ್ವಾಮಿಯ ಮುಳ್ಳೋತ್ಸವ ಶ್ರದ್ಧಾ-ಭಕ್ತಿಯಿಂದ ನಡೆಯಿತು, ಭೂತಪ್ಪನನ್ನು ಹೊತ್ತ ದಾಸಪ್ಪ ಮೊದಲು ಮುಳ್ಳು ತುಳಿದ ನಂತರ ಹರಕೆ ಹೊತ್ತ ಭಕ್ತರು ಮುಳ್ಳು ತುಳಿದು ಭಕ್ತಿ ಸಮರ್ಪಿಸಿದರು.






# 24 ರಂದು ದಾವಿವಿ 9ನೇ ಘಟಿಕೋತ್ಸವ

ದಾವಣಗೆರೆ, ಮಾ.20- ದಾವಣಗೆರೆ ವಿಶ್ವವಿದ್ಯಾನಿಲಯದ 9ನೇ ವಾರ್ಷಿಕ ಘಟಿಕೋತ್ಸವವನ್ನು ಇದೇ ದಿನಾಂಕ 24 ರಂದು ವಿಶ್ವ ವಿದ್ಯಾನಿಲಯದ ಆವರಣದಲ್ಲಿ ನಡೆಯಲಿದೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಧ್ಯಕ್ಷತೆ ವಹಿಸುವರು.


## ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

**ಶಾಂತಲಾ ವೆಡ್ಡಿಂಗ್ ಮಾಲ್**

ಚಾಮರಾಜಪೇಟೆ, ದಾವಣಗೆರೆ - 577 001. 96861 95327

SS IMS SPARSH CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**

D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)

ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 24ನೇ ಮಾರ್ಚ್ 2022 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 5ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ

**ನೋಂದಣಿಗಾಗಿ ಕರೆಮಾಡಿ: 96869 29090**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ

'We are happy to invite you on the'

"inauguration of our new venture"

## "NEW KINETIC GREEN ELECTRIC SCOOTER SHOWROOM"

ON 21ST MARCH, MONDAY AT 5:00 PM



GUEST OF HONOUR

SRI RATAN KUMAR RATNA
Regional Manager, SBI-RBO 3 Davangere.

SRI Dr. JAYANTH D S
Director, Sri Siddaganga PU College, Davangere.

SRI PREETAM KUMAR
Chief Manager, SBI Davangere.

KINETIC GREEN A Better Tomorrow

VENUE :
Sree Mallikarjuna Motor & Scooter Mart
#868/1, Shankarvihar Extension, Old P.B. Road, (Harihar Rd.), Davangere-577 006.





Awaiting Your Presence
GURUSIDDAIAH N.J.
Chairman, Sree Mallikarjuna Group of Organisation.
MANAGEMENT & STAFF.

1980–90 ರಲ್ಲಿ ಜನ ಸಾಮಾನ್ಯರ ಮನೆ ಮಾತಾಗಿದ್ದ 'ಲೂನಾ' ಇಂದು ಹೊಸ ರೂಪದಲ್ಲಿ ಕೈನೆಟಿಕ್ ಗ್ರೀನ್ ಎಲೆಕ್ಟ್ರಿಕ್ ವಾಹನವಾಗಿ ನಿಮ್ಮ ಮನೆ ಬಾಗಿಲಿಗೆ ಬಂದಿದೆ. 'ಚಲ್ ಮೇರಿ ಲೂನಾ' ಎಂಬ ಮಾತು ಆಗ ತುಂಬ ಪ್ರಚಲಿತದಲ್ಲಿತ್ತು.

ಅಂದಿನ ಕೈನೆಟಿಕ್ ಲೂನಾ ಇಂದು ಕೈನೆಟಿಕ್ ಗ್ರೀನ್ ಎಲೆಕ್ಟ್ರಿಕ್ ವಾಹನವಾಗಿ ಪರಿವರ್ತನೆಗೊಂಡಿದೆ. ಪೆಟ್ರೋಲ್ ಅಭಾವ, ಪರಿಸರ ಕಾಳಜಿ, ಜನಸಾಮಾನ್ಯರ ಕನಸುಗಳನ್ನು ಗಮನದಲ್ಲಿಟ್ಟುಕೊಂಡು ಕೈನೆಟಿಕ್ ಗ್ರೀನ್ ಎಲೆಕ್ಟ್ರಿಕ್ ವಾಹನ ಮಾರುಕಟ್ಟೆಗೆ ಬಂದಿದೆ. ಇದು ಮಧ್ಯಮ ವರ್ಗದವರ ಪ್ರೀತಿಗೆ ಪಾತ್ರವಾಗುವುದರಲ್ಲಿ ಎರಡು ಮಾತಿಲ್ಲ.

ಕೈನೆಟಿಕ್ ಕಂಪೆನಿ ಸಂಸ್ಥಾಪಕ ಹಾಗು ಸಿಇಓ ಶ್ರೀಮತಿ ಸುಲಜ್ಜಾ ಅವರು Think Electric,Think Kinetic ಎಂಬ ಘೋಷಣೆ ಮೂಲಕ 4 ರಿಂದ 5 ಶ್ರೇಣಿಯ ಗ್ರೀನ್ ಎಲೆಕ್ಟ್ರಿಕ್ ವಾಹನಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte